ನಿಮ್ಮೂರು ಸುದ್ದಿ

ಕನ್ನಡ ದಿನ ಪತ್ರಿಕೆ NIMMURU SUDDI

ಸಂಪಾದಕರು: ಸುಂದರ್ Editor : Sundar

ಏಕ ಕಾಲಕ್ಕೆ
ಬಳ್ಳಾರಿ,
ಕೊಪ್ಪಳ,
ಯಾದಗಿರಿ,
ರಾಯಚೂರು,
ಕಲಬುರ್ಗಿ,
ಬೀದರ,
ವಿಜಯನಗರ
ಜಿಲ್ಲೆಗಳಲ್ಲಿ ಪ್ರಕಟ

Volume: 01, Issue: 95 RNI Number : KNKAN/25/A2770 14-04-2026 Tuesday Page 04, Price 2/- suddinimmuru@gmail.com Mob:-8660146563

ಸಂಪುಟ :01 ಸಂಚಿಕೆ :95 ರಾಯಚೂರು 14-04-2026 ಮಂಗಳವಾರ ಪುಟ 04 ಬೆಲೆ ರೂ.2/- ಮೊ:8660146563

ಪಂಚಭೂತಗಳಲ್ಲಿ ಲೀನವಾದ ಭಾರತೀಯ ಸಂಗೀತ ದಿಗ್ಗಜೆ

ಸರ್ಕಾರಿ ಗೌರವಗಳೊಂದಿಗೆ ಆಶಾ ಭೋಸ್ಲೆ ಅಂತ್ಯಕ್ರಿಯೆ

ಮುಂಬೈ (ಮಹಾರಾಷ್ಟ್ರ): ಖ್ಯಾತ ಹಿನ್ನೆಲೆ ಗಾಯಕಿ ಆಶಾ ಭೋಸ್ಲೆ ಏಪ್ರಿಲ್ 12ರಂದು ತಮ್ಮ 92ನೇ ವಯಸ್ಸಿನಲ್ಲಿ ನಿಧನರಾದರು. ಅನಾರೋಗ್ಯದಿಂದ ಬಳಲುತ್ತಿದ್ದ ಅವರನ್ನು ಶನಿವಾರ ಸಂಜೆ ಬ್ರೀಚ್ ಕ್ಯಾಂಡಿ ಆಸ್ಪತ್ರೆಗೆ ದಾಖಲಿಸಲಾಗಿತ್ತು. ಆದ್ರೆ, ಭಾನುವಾರ ಕೊನೆಯುಸಿರೆಳೆದು ಸಂಗೀತ ಜಗತ್ತನ್ನು ತೀವ್ರ ಆಘಾತದಲ್ಲಿ ಮುಳುಗಿಸಿದರು. ಇಂದು ಸಂಜೆ ಮುಂಬೈನ ಶಿವಾಜಿ ಪಾರ್ಕ್‌ನಲ್ಲಿ ಸಕಲ ಸರ್ಕಾರಿ ಗೌರವಗಳೊಂದಿಗೆ ನೆರವೇರಿದೆ.



ಅಪ್ರತಿಮ ಬಹುಮುಖ ಪ್ರತಿಭೆಗೆ ಹೆಸರುವಾಸಿಯಾದ ಗಾಯಕಿ ಆಶಾ ಭೋಸ್ಲೆ ಬಹು ಭಾಷೆಗಳಲ್ಲಿ ಸಾವಿರಾರು ಹಾಡುಗಳಿಗೆ ತಮ್ಮ ಕಂಠದಾನ ಮಾಡಿದ್ದಾರೆ. ಅವರ ಧ್ವನಿ ಹಿಂದಿ ಚಲನಚಿತ್ರ ಸಂಗೀತದ ಪೀಳಿಗೆಗಳನ್ನು ವ್ಯಾಖ್ಯಾನಿಸಿತು. ಅಸಂಖ್ಯಾತ ಗಾಯಕರ, ಗಾನಪ್ರಿಯರ ಮೇಲೆ ಪ್ರಭಾವ ಬೀರಿತು. ಅನೇಕರು ಅವರ ನಿಧನವನ್ನು ಭಾರತೀಯ ಸಂಗೀತದಲ್ಲಿ ಒಂದು ಯುಗದ ಅಂತ್ಯ ಎಂದು ಕರೆದಿದ್ದಾರೆ.

ಆಶಾ ಪರೇಖ್, ಸಚಿನ್ ತೆಂಡೂಲ್ಕರ್, ಎ.ಆರ್.ರೆಹಮಾನ್ ಸೇರಿದಂತೆ ಹಲವಾರು ರಾಜಕೀಯ ಮತ್ತು ಸಿನಿಮಾ ಗಣ್ಯರು ಭೇಟಿ ಗಾಯಕಿಯ ಪಾರ್ಥಿವ ಶರೀರದ ಅಂತಿಮ ದರ್ಶನ ಪಡೆದುಕೊಂಡಿದ್ದಾರೆ.

ಆಶಾ ಭೋಸ್ಲೆ ಅವರು ಸೆಪ್ಟೆಂಬರ್ 8, 1933ರಂದು ಮಹಾರಾಷ್ಟ್ರದ ಸಾಂಗ್ಲಿಯಲ್ಲಿ ಮಂಗೇಶ್ಕರ್ ಕುಟುಂಬದಲ್ಲಿ ಜನಿಸಿದರು. ಮಂಗೇಶ್ಕರ್ ಕುಟುಂಬ ಪ್ರತಿಭೆಯ ಶಕ್ತಿಕೇಂದ್ರವಾಗಿತ್ತು. ತಂದೆ ಪಂಡಿತ್ ದೀನನಾಥ್ ಮಂಗೇಶ್ಕರ್ ಅವರ ಸಂಗೀತ ಪರಂಪರೆಯನ್ನು ಮುಂದುವರೆಸಿದರು. ಲತಾ ಮಂಗೇಶ್ಕರ್, ಆಶಾ ಭೋಸ್ಲೆ, ಉಷಾ ಮಂಗೇಶ್ಕರ್ ಮತ್ತು ಮೀನಾ ಮಂಗೇಶ್ಕರ್ ಗಾಯನ ಲೋಕಕ್ಕೆ ತಮ್ಮನ್ನು ಸಮರ್ಪಿಸಿಕೊಂಡರೆ, ಸಹೋದರ ಹೃದಯನಾಥ್ ಮಂಗೇಶ್ಕರ್ ಪ್ರಸಿದ್ಧ ಸಂಗೀತ ನಿರ್ದೇಶಕರಾಗಿ ಜನಪ್ರಿಯತೆ ಪಡೆದರು.

ಗಾನಕೋಗಿಲೆ ಆಶಾ ಭೋಸ್ಲೆ ಏಳು ದಶಕಗಳ ವೃತ್ತಿಪರ ಪ್ರಯಾಣವನ್ನು ಹೊಂದಿದ್ದಾರೆ. ದಿಲ್ ಚೀಝ್ ಕ್ಯಾ ಹೈ, ಪಿಯಾ ತು ಅಬ್ ತೋ ಆಜಾ, ಮೇರಾ ಕುಚ್ ಸಾಮನ್ ಮತ್ತು ಚುರಾ ಲಿಯಾ ಹೈ ತುಮ್ನೆ ಸೇರಿದಂತೆ ಮೊದಲಾದ ಪ್ರಸಿದ್ಧ ಹಾಡುಗಳಿಗೆ ಹೆಸರುವಾಸಿಯಾಗಿದ್ದಾರೆ. ಶಾಸ್ತ್ರೀಯ ಮತ್ತು ಗಜಲ್‌ಗಳಿಂದ ಹಿಡಿದು ಕ್ಯಾಬರೆ ಮತ್ತು ಪಾಪ್‌ವರೆಗೆ ತಮ್ಮ ಬಹುಮುಖ ಪ್ರತಿಭೆಯನ್ನು ಪ್ರದರ್ಶಿಸಿದ್ದಾರೆ. ಕನ್ನಡ ಹಾಡುಗಳನ್ನು ಗಮನಿಸೋದಾದ್ರೆ, 1967ರಲ್ಲಿ ಬಂದ 'ಕ್ರಾಂತಿವೀರ ಸಂಗೊಳ್ಳಿ ರಾಯಣ್ಣ' ಸಿನಿಮಾದ 'ಯಾಕೋ ಏನೋ ಜಾರಿ', 1973ರಲ್ಲಿ ಬಂದ ರಾಜ್‌ಕುಮಾರ್ ನಟನೆಯ 'ದೂರದ ಬೆಟ್ಟ' ಸಿನಿಮಾದ 'ಸವಾಲು ಹಾಕಿ ಸೋಲಿಸಿ' ಹಾಡು ಮತ್ತು 2010ರಲ್ಲಿ ಮೂಡಿಬಂದ 'ಮತ್ತೆ ಮುಂಗಾರು' ಸಿನಿಮಾದ 'ಹೇಳದೆ ಕಾರಣ' ಎಂಬ ಹಾಡನ್ನು ಹಾಡಿದ್ದರು. ಅವರ ಒಟ್ಟಾರೆ ವೃತ್ತಿಜೀವನವು ಅವರನ್ನು ಭಾರತೀಯ ಸಂಗೀತ ಇತಿಹಾಸದಲ್ಲಿ ಅತ್ಯಂತ ಪ್ರಸಿದ್ಧ ಮತ್ತು ಪ್ರಭಾವಶಾಲಿ ಧ್ವನಿಗಳಲ್ಲಿ ಒಂದನ್ನಾಗಿಸಿದೆ.



ತಾಲೂಕಾಧ್ಯಕ್ಷರ ನೇಮಕಾತಿ ವಿವಾದ : ಹೈಕೋರ್ಟ್‌ನಲ್ಲಿ ಅರ್ಜಿ ವಜಾ

ರಾಯಚೂರು,ಏ.13-

ರಾಯಚೂರು ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತಿನ ತಾಲೂಕಾಧ್ಯಕ್ಷರ ನೇಮಕಾತಿಗೆ ಆಕ್ಷೇಪಿಸಿ ಸಲ್ಲಿಕೆಯಾಗಿದ್ದ ಅರ್ಜಿಯನ್ನು ಹೈಕೋರ್ಟ್ ವಜಾಗೊಳಿಸಿದೆ.

ಜಿಲ್ಲಾ ಕಸಾಪದ ತಾಲೂಕಾಧ್ಯಕ್ಷರ ನೇಮಕಾತಿಗೆ ಸಂಬಂಧಿಸಿದಂತೆ ಸಲ್ಲಿಕೆಯಾಗಿದ್ದ ಮೇಲ್ಮನವಿಯನ್ನು ಕಲಬುರಗಿಯ ಹೈಕೋರ್ಟ್ ವಿಭಾಗೀಯ ಪೀಠವು ತಳ್ಳಿಹಾಕಿ, ಜಿಲ್ಲಾಧ್ಯಕ್ಷರ ನಿರ್ಧಾರವನ್ನು ಸಮರ್ಥಿಸಿದೆ.

ಕಳೆದ ವರ್ಷ ಸೆ.22ರಂದು ಜಿಲ್ಲಾಧ್ಯಕ್ಷ ರಂಗಣ್ಣ ಪಾಟೀಲ್ ಅಳ್ಳುಂಡಿ ಅವರು ಸಿಂಧನೂರು, ಮಸ್ಕಿ, ಲಿಂಗಸೂಗೂರು, ರಾಯಚೂರು, ಮಾನ್ವಿ ಹಾಗೂ ಸಿರವಾರ ತಾಲೂಕುಗಳ ಅಧ್ಯಕ್ಷರನ್ನು ಬದಲಾವಣೆ ಮಾಡಿದ್ದರು. ಚುನಾವಣಾ ಸಂದರ್ಭದಲ್ಲಿ ನೀಡಿದ್ದ ಭರವಸೆಯಂತೆ, ಎರಡುವರೆ ವರ್ಷಗಳ ಬಳಿಕ ಹೊಸಬರಿಗೆ ಅವಕಾಶ ಕಲ್ಪಿಸುವ ಉದ್ದೇಶದಿಂದ ಈ ಬದಲಾವಣೆ ಕೈಗೊಳ್ಳಲಾಗಿತ್ತು.

ಈ ನೇಮಕಾತಿಯನ್ನು ಪ್ರಶ್ನಿಸಿ ಸಿಂಧನೂರು ತಾಲೂಕಿನ ಪಂಪಯ್ಯಸ್ವಾಮಿ ಸಾಲಿಮಠ, ಮಸ್ಕಿಯ ಮಹಾಂತೇಶ ಬ್ಯಾಳಿ, ಸಿರವಾರದ ಸುರೇಶ್ ಹೀರಾ, ಲಿಂಗಸೂಗೂರಿನ ಮಲ್ಲಿಕಾರ್ಜುನ ಗೌಡೂರು, ಮಾನ್ವಿಯ ರವಿಕುಮಾರ ಪಾಟೀಲ ಹಾಗೂ ರಾಯಚೂರಿನ ವೆಂಕಟೇಶ ಬೇವಿನಬೆಂಚಿ ಅವರು ಹೈಕೋರ್ಟ್ ಮೆಟ್ಟಿಲೇರಿದ್ದರು.



ಅರ್ಜಿದಾರರು ಈ ಪ್ರಕರಣವನ್ನು ಸಾರ್ವಜನಿಕ ಹಿತಾಸಕ್ತಿ ಅರ್ಜಿಯಾಗಿ ಪರಿಗಣಿಸಲು ಕೋರಿದರೂ, ನ್ಯಾಯಾಲಯ ಇದನ್ನು ಸಾರ್ವಜನಿಕ ಹಿತಾಸಕ್ತಿ ವ್ಯಾಪ್ತಿಗೆ ಒಳಪಡುವುದಿಲ್ಲವೆಂದು ಸ್ಪಷ್ಟಪಡಿಸಿ, ಸಂಬಂಧಪಟ್ಟ ಪ್ರಾಧಿಕಾರದ ಮುಂದೆ ಮನವಿ ಸಲ್ಲಿಸಬಹುದು ಎಂದು ಸೂಚಿಸಿ ಅರ್ಜಿಯನ್ನು ವಜಾಗೊಳಿಸಿದೆ.

ಜಿಲ್ಲಾಧ್ಯಕ್ಷರ ಪ್ರತಿಕ್ರಿಯೆ :

ನ್ಯಾಯಾಲಯದ ತೀರ್ಪಿನ ಕುರಿತು ಪ್ರತಿಕ್ರಿಯಿಸಿದ ಜಿಲ್ಲಾಧ್ಯಕ್ಷ ರಂಗಣ್ಣ ಪಾಟೀಲ್ ಅಳ್ಳುಂಡಿ ಅವರು, ಸಿಂಧನೂರಿನ ಮಾಜಿ ತಾಲೂಕಾಧ್ಯಕ್ಷ ಪಂಪಯ್ಯಸ್ವಾಮಿ ಸಾಲಿಮಠ ಅವರು ಉಳಿದ ಅಧ್ಯಕ್ಷರನ್ನು ದಾರಿ ತಪ್ಪಿಸಿ ನ್ಯಾಯಾಲಯಕ್ಕೆ ಹೋಗುವಂತೆ ಮಾಡಿದ್ದರು. ಇದಕ್ಕೆ ಕೇಂದ್ರ ಕಸಾಪ ಮಾಜಿ ಅಧ್ಯಕ್ಷ ಮಹೇಶ ಜೋಶಿ ಅವರ ಪ್ರೇರೇಪಣೆಯೂ ಇತ್ತು. ಕೆಲವರು ಅಧಿಕಾರಕ್ಕಾಗಿ ಹಪಾಹಪಿಸಿ ನನ್ನ ತೇಜೋವಧೆ ಮಾಡಲು ಯತ್ನಿಸಿದರು, ಜಿಲ್ಲಾ ಕಸಾಪ ಕಚೇರಿ ಮುಂದೆ ಪ್ರತಿಭಟನೆಯನ್ನೂ ನಡೆಸಿದರು ಎಂದು ಬೇಸರ ವ್ಯಕ್ತಪಡಿಸಿದರು.

ಈ ತೀರ್ಪಿನಿಂದ ಸುಳ್ಳು ಆರೋಪ ಮಾಡಿದವರಿಗೆ ಮುಖಭಂಗವಾಗಿದೆ. ಈಗಲಾದರೂ ಅವರು ಇಂತಹ ಕುತಂತ್ರದ ಬುದ್ಧಿ ಬಿಟ್ಟು, ಜಿಲ್ಲೆಯಲ್ಲಿ ಕನ್ನಡ ಸಾಹಿತ್ಯ ಪರಿಷತ್ತಿನ ಬೆಳವಣಿಗೆಗೆ ಸಹಕರಿಸಬೇಕು. ಅಧ್ಯಕ್ಷ ಸ್ಥಾನಗಳು ಶಾಶ್ವತವಲ್ಲ, ಆದರೆ ನಂಬಿಕೆ ಮತ್ತು ಗೆಳೆತನ ಮುಖ್ಯ ಎಂಬುದನ್ನು ಅರಿಯಬೇಕು, ಎಂದು ಅವರು ತಿಳಿಸಿದ್ದಾರೆ.

ಏ 20ಕ್ಕೆ ಕರ್ನಾಟಕ ರಾಜ್ಯ ಛಲವಾದಿ ಮಹಾಸಭಾ ವತಿಯಿಂದ ಸಾಮೂಹಿಕ ವಿವಾಹದ ಕರಪತ್ರ ಬಿಡುಗಡೆ



ಸಿಂಧನೂರು, ಏ.13-

ಸಿಂಧನೂರು ಕರ್ನಾಟಕ ರಾಜ್ಯ ಛಲವಾದಿ ಮಹಾಸಭಾದ ತಾಲೂಕ ಸಮಿತಿ ಸಿಂಧನೂರು ವತಿಯಿಂದ ರಾಜ್ಯಾಧ್ಯಕ್ಷರಾದ ಶ್ರೀ ಸಿದ್ದಯ್ಯ ಐ ಎ ಎಸ್ ನಿವೃತ್ತ ಅಧಿಕಾರಿಗಳು ಅವರ ನಿರ್ದೇಶನದ ಮೇರೆಗೆ ರಾಯಚೂರು ಜಿಲ್ಲೆ ಸಿಂಧನೂರು ತಾಲೂಕಿನಲ್ಲಿ ಪ್ರಥಮ ಬಾರಿಗೆ 21 ಜೋಡಿಯ ಸಾಮೂಹಿಕ ವಿವಾಹ ಕಾರ್ಯಕ್ರಮದ ಕರ್ನಾಟಕ ರಾಜ್ಯ ಛಲವಾದಿ ಮಹಾಸಭಾ ಜಿಲ್ಲಾಧ್ಯಕ್ಷ ಶಿವರಾಜ ಎಂದು ಹೇಳಿದರು.

ನಗರದ ಸರ್ಕಿಟ್ ಹೌಸ್ ನಲ್ಲಿ ರವಿವಾರ ಏ. 20 ರಂದು ನಡೆಯುವ ಸಾಮೂಹಿಕ ವಿವಾಹದ ಕರಪತ್ರ ಬಿಡುಗಡೆಗೊಳಿಸಿ ಮಾತನಾಡಿದ ಅವರು ನಗರದ ಪಿಡಬ್ಲ್ಯೂಡಿ ಕ್ಯಾಂಪಿನ ಹತ್ತಿರ ಯಮನೂರಪ್ಪ ದರ್ಗಾ ಜಾಗದಲ್ಲಿ ಏಪ್ರಿಲ್ 20 ರಂದು 21 ಜೋಡಿಯ ಸಾಮೂಹಿಕ ವಿವಾಹಗಳ ನಡೆಯಲಿದೆ ಹಮ್ಮಿಕೊಳ್ಳಲಾಗಿದೆ. ಹಾಗೂ ಏಪ್ರಿಲ್ 16 ರಂದು ಬೆಂಗಳೂರಿನ ವಸಂತ ನಗರದಲ್ಲಿರುವ ಡಾ ಬಿ ಆರ್ ಅಂಬೇಡ್ಕರ್ ಭವನದಲ್ಲಿ ಭಾರತ ಸರ್ಕಾರ ಹಮ್ಮಿಕೊಂಡಿರುವ ಜನಗಣತಿಯ ಕುರಿತು ಬಲಗೈ ಸಂಬಂಧಿತ ಜಾತಿಗಳ ಸಮಾಜಕ್ಕೆ ಅರಿವು ಮೂಡಿಸುವ ಉದ್ದೇಶದಿಂದ ಈ ಒಂದು ಕಾರ್ಯಕ್ರಮವನ್ನು ಬಲಗೈ ಸಂಬಂಧಿತ ಜಾತಿಗಳ

3ನೇ ಪುಟಕ್ಕೆ

ಜಿಲ್ಲಾ ಚಲವಾದಿ ನೌಕರರ ಸಂಘ ಸ್ಥಾಪನೆ: ವಿವಿಧ ಇಲಾಖೆ ನೌಕರರಿಗೆ ಹೊಣೆಗಾರಿಕೆ ಹಂಚಿಕೆ



ರಾಯಚೂರು,ಏ.13-

ನಗರದ ಸಿದ್ದಾರ್ಥ ಬುದ್ಧ ವಿಹಾರದಲ್ಲಿ ಹಿರಿಯರು ಹಾಗೂ ವಿವಿಧ ಇಲಾಖೆಗಳ ನೌಕರರ ಸಮ್ಮುಖದಲ್ಲಿ ನಡೆದ ಸಭೆಯಲ್ಲಿ ಜಿಲ್ಲಾ ಚಲವಾದಿ ನೌಕರರ ಸಂಘವನ್ನು ಅಧಿಕೃತವಾಗಿ ಸ್ಥಾಪಿಸಲಾಯಿತು. ಸಭೆಯಲ್ಲಿ ಸಂಘದ ರಚನೆ ಕುರಿತು ಚರ್ಚಿಸಿ ಹಿರಿಯರ ಸಲಹೆಯಂತೆ ಪದಾಧಿಕಾರಿಗಳನ್ನು ಆಯ್ಕೆ ಮಾಡಲಾಯಿತು.

ಜಿಲ್ಲಾಧ್ಯಕ್ಷರಾಗಿ ರಾಘವೇಂದ್ರ ಛಲವಾದಿ ಆಯ್ಕೆಯಾಗಿದ್ದು, ಪ್ರಧಾನ ಕಾರ್ಯದರ್ಶಿಯಾಗಿ ಶೈಲೇಶ್ ಬಳಗನೂರು (ಕೃಷಿ ವಿಶ್ವವಿದ್ಯಾಲಯ) ನೇಮಕಗೊಂಡರು. ಜಿಲ್ಲಾ ಗೌರವಾಧ್ಯಕ್ಷರಾಗಿ ಷಣ್ಮುಖಪ್ಪ, ಕೋಶಾಧ್ಯಕ್ಷರಾಗಿ ಶಿವಕುಮಾರ್ (ಕೆಇಬಿ) ಆಯ್ಕೆಯಾದರು.

ಜಿಲ್ಲಾ ಜಂಟಿ ಕಾರ್ಯದರ್ಶಿಯಾಗಿ ನರಸಿಂಹ (ಕೃಷಿ ವಿಶ್ವವಿದ್ಯಾಲಯ), ಜಿಲ್ಲಾ ಸಂಘಟನಾ ಕಾರ್ಯದರ್ಶಿಯಾಗಿ ಶ್ರೀನಿವಾಸ್ (ಕಂದಾಯ ಇಲಾಖೆ) ಹಾಗೂ ಮಲ್ಲೆ ಮಲ್ಲೇಶ್ ಬೊಮ್ಮನಾಳ (ಕೃಷಿ ವಿಶ್ವವಿದ್ಯಾಲಯ) ಅವರನ್ನು ಸಂಘಟನಾ ಕಾರ್ಯದರ್ಶಿಯಾಗಿ ಆಯ್ಕೆ ಮಾಡಲಾಯಿತು. ಸಂಘದ ಕಾನೂನು ಸಲಹೆಗಾರರಾಗಿ ವಿನೋದ್ ಸಾಗರ್ ಅವರನ್ನು ನೇಮಕ ಮಾಡಲಾಯಿತು.

3ನೇ ಪುಟಕ್ಕೆ

ನವ ಉದಾರೀಕರಣವೇ ಅಭಿವೃದ್ಧಿ ಎಂದು ಕೇಂದ್ರ ಸರಕಾರ ಅಸಮಾನತೆ ಪೋಷಿಸುತ್ತಿದೆ : ಶ್ರೀಪಾದ್ ಭಟ್

ರಾಯಚೂರು: ಬಡವರ ಹಾಗೂ ಶ್ರೀಮಂತರ ನಡುವಿನ ಅಂತರ ಹೆಚ್ಚುತ್ತಿದ್ದು, ಕೇಂದ್ರ ಸರ್ಕಾರದ ನವಉದಾರೀಕರಣ ನೀತಿಗಳು ಅಸಮಾನತೆಯನ್ನು ಮತ್ತಷ್ಟು ಹೆಚ್ಚಿಸುತ್ತಿವೆ ಎಂದು ಬೆಂಗಳೂರಿನ ಶಿಕ್ಷಣ ತಜ್ಞ ಬಿ. ಶ್ರೀಪಾದ ಭಟ್ ಅಭಿಪ್ರಾಯಪಟ್ಟರು.

ನಗರದ ಪಂಡಿತ್ ಸಿದ್ದರಾಮ ಜಂಬಲದಿನ್ನಿ ರಂಗಮಂದಿರದಲ್ಲಿ ಸಮುದಾಯ ರಾಯಚೂರು ಸಾಂಸ್ಕೃತಿಕ ಸಂಘಟನೆಯಿಂದ ಆಯೋಜಿಸಿದ್ದ ರಾಜಕೀಯ ಆರ್ಥಿಕತೆ ಮತ್ತು ಉದ್ಯೋಗ ನೀತಿ ಕುರಿತ ಉಪನ್ಯಾಸದಲ್ಲಿ ಅವರು ಮಾತನಾಡಿದರು.



ಸಂಪತ್ತಿನ ಒಡೆತನ ಹಾಗೂ ಹಂಚಿಕೆ ಕೆಲವೇ ಮಂದಿಯ ಕೈಯಲ್ಲಿ ಕೇಂದ್ರೀಕೃತವಾಗುತ್ತಿರುವುದು ಆತಂಕಕಾರಿ. ಒಕ್ಕೂಟ ವ್ಯವಸ್ಥೆಯ ಮೇಲೆ ಕೇಂದ್ರದ ಹಿಡಿತ ಹೆಚ್ಚಾಗುತ್ತಿರುವುದರಿಂದ ಸಾಮಾನ್ಯ ಜನರ ಬದುಕು ದುಸ್ತರವಾಗುತ್ತಿದೆ ಎಂದು ಹೇಳಿದರು.

ಇಂದಿನ ಪರಿಸ್ಥಿತಿಯಲ್ಲಿ ಕೆಲವೇ ಉದ್ಯಮಿಗಳ ಕೈಯಲ್ಲಿ ದೇಶದ ಸಂಪತ್ತು ಕ್ರೋಢೀಕೃತವಾಗುತ್ತಿದೆ. ರಾಜಕೀಯ ಆರ್ಥಿಕತೆಯ ಭಾಗವಾಗಿ ಜನರಲ್ಲಿ ಭ್ರಮೆ ಸೃಷ್ಟಿಸಿ ಅಭಿವೃದ್ಧಿಯ ಹೆಸರಿನಲ್ಲಿ ನೀತಿಗಳನ್ನು ಜಾರಿಗೊಳಿಸಲಾಗುತ್ತಿದೆ ಎಂದು ಅವರು ಟೀಕಿಸಿದರು.

ರಾಜಕೀಯ ಪಕ್ಷಗಳ ಕುರಿತು ಮಾತನಾಡಿದ ಅವರು, ಕಾಂಗ್ರೆಸ್ ಪಕ್ಷವು ಬಿಜೆಪಿಯನ್ನು ಆರ್ಥಿಕ ಹಾಗೂ ಸೈದ್ಧಾಂತಿಕವಾಗಿ ಎದುರಿಸುವ ಶಕ್ತಿಯನ್ನು ಕಳೆದುಕೊಂಡಿದೆ ಎಂದು ಅಭಿಪ್ರಾಯಪಟ್ಟರು.

ಇದೇ ವೇಳೆ ಗ್ಯಾರಂಟಿ ಯೋಜನೆಗಳ ಕುರಿತು ಮಾತನಾಡಿ, ಕರ್ನಾಟಕದಲ್ಲಿ ವಿರೋಧಿಸುವ ಬಿಜೆಪಿ ಪಶ್ಚಿಮ ಬಂಗಾಳದಲ್ಲಿ ಗ್ಯಾರಂಟಿಗಳನ್ನು ಘೋಷಿಸಿರುವುದು ರಾಜಕೀಯ ವಿರೋಧಾಭಾಸ ಎಂದು ಹೇಳಿದರು.

ಕಾರ್ಯಕ್ರಮ ಉದ್ಘಾಟಿಸಿದ ಶಿಕ್ಷಣ ಇಲಾಖೆಯ ನಿವೃತ್ತ ಉಪನಿರ್ದೇಶಕಿ ಆರ್. ಇಂದಿರಾ ಅವರು ನಿರುದ್ಯೋಗ ಸಮಸ್ಯೆಯಿಂದ ಯುವಕರ ಬದುಕು ಸಂಕಷ್ಟಕರವಾಗುತ್ತಿದೆ. ಜನರ ಬದುಕು ಹಸನಗೊಳಿಸುವ ಯೋಜನೆಗಳನ್ನು ರೂಪಿಸಬೇಕಾಗಿದೆ ಎಂದು ಹೇಳಿದರು.

ಕರ್ನಾಟಕ ರಾಜ್ಯ ರೈತ ಸಂಘದ ಗೌರವಾಧ್ಯಕ್ಷ ಚಾಮರಸ

3ನೇ ಪುಟಕ್ಕೆ

ಪಿರಮಿಡ್ ಧ್ಯಾನದ ಮಹತ್ವ ಪರಿಚಯ, ಪ್ರಾಣಪ್ರತಿಷ್ಠಾಪನೆ, ಸಾರ್ವಜನಿಕರಿಗೆ ಆಹ್ವಾನ

ರಾಯಚೂರು,ಏ.13-

ಪಿರಮಿಡ್ ಸ್ಪಿರಿಚ್ಯುವಲ್ ಸೊಸೈಟೀಸ್ ಮೂವ್‌ಮೆಂಟ್, ಇಂಡಿಯಾ ವತಿಯಿಂದ ನಗರದ ಮಧುರಾ ಕಾಲೋನಿ ಬೋಳಮಾನದೊಡ್ಡಿ ರಸ್ತೆಯಲ್ಲಿ ನಿರ್ಮಿತ ಶ್ರೀ ಲಕ್ಷ್ಮಿ ವೆಂಕಟೇಶ್ವರ ಪಿರಮಿಡ್ ಧ್ಯಾನ ಮಂದಿರದ ಲೋಕಾರ್ಪಣೆ ಸಮಾರಂಭವನ್ನು ಏಪ್ರಿಲ್ 14ರಂದು ಅದ್ದೂರಿಯಾಗಿ ಆಯೋಜಿಸಲಾಗಿದೆ ಎಂದು ನ್ಯೂ ಏಜ್ ಮಾಸ್ಟರ್ ಹಿರಿಯ ಸಲಹೆಗಾರ ಎ. ಕೋಟೇಶ್ವರ್ ರಾವ್ ತಿಳಿಸಿದರು.



ನಗರದ ಪತ್ರಿಕಾ ಭವನದಲ್ಲಿ ನಡೆದ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಬೆಳಿಗ್ಗೆ 8 ಗಂಟೆಗೆ ಪಿರಮಿಡ್ ಅವಗಾಹನಾ ಕಾರ್ಯಕ್ರಮ ನಡೆಯಲಿದ್ದು, ಧ್ಯಾನದ ಮಹತ್ವ ಹಾಗೂ ಪಿರಮಿಡ್ ಶಕ್ತಿಯ ವೈಶಿಷ್ಟ್ಯಗಳ ಕುರಿತು ವಿಶೇಷ ಮಾಹಿತಿ ನೀಡಲಾಗುತ್ತದೆ. ಬೆಳಿಗ್ಗೆ 9.30ಕ್ಕೆ ಉದ್ಘಾಟನೆ ಹಾಗೂ ಜ್ಯೋತಿ ಪ್ರಜ್ವಲನೆ ನಡೆಯಲಿದ್ದು, ಬಳಿಕ 10ರಿಂದ ಮಧ್ಯಾಹ್ನ 12ರವರೆಗೆ ಪ್ರಾಣಪ್ರತಿಷ್ಠಾಪನೆ ಕಾರ್ಯಕ್ರಮ ಸಂಗೀತ ಧ್ಯಾನದೊಂದಿಗೆ ನೆರವೇರಲಿದೆ ಎಂದು ಹೇಳಿದರು.

ಮಧ್ಯಾಹ್ನ 12ರಿಂದ 1.30ರವರೆಗೆ ಸಜ್ಜನ ಸಾಂಗತ್ಯ ಕಾರ್ಯಕ್ರಮದಲ್ಲಿ ಆಧ್ಯಾತ್ಮಿಕ ಚಿಂತನೆಗಳು ಮತ್ತು ಅನುಭವ ಹಂಚಿಕೊಳ್ಳುವ ಕಾರ್ಯಕ್ರಮ ನಡೆಯಲಿದೆ. ಬ್ರಹ್ಮರ್ಷಿ ಪಿತಾಮಹ ಪತ್ರೀಜಿ ಆಶೀರ್ವಚನ ನೀಡಲಿದ್ದು, ಬಳಿಕ 1.30ಕ್ಕೆ ಭೋಜನ ವ್ಯವಸ್ಥೆ ಮಾಡಲಾಗಿದೆ. ಹೆಚ್ಚಿನ ಸಂಖ್ಯೆಯಲ್ಲಿ ಸಾರ್ವಜನಿಕರು ಭಾಗವಹಿಸುವಂತೆ ಮನವಿ ಮಾಡಿದರು.

ರಾಯಚೂರು ಕೋಟೆ ಮೇಲಿನ

3ನೇ ಪುಟಕ್ಕೆ

ಏ.15 ರವರೆಗೆ ಸ್ವಯಂ ಜನಗಣತಿಗೆ ಅವಕಾಶ: ಭೀಮರಾಯ ಬಿ



ಮಾನ್ವಿ,ಏ.13-

ತಾಲೂಕಿನ ಕರಡಿ ಗುಡ್ಡ ಗ್ರಾಮದಲ್ಲಿ ಜನಗಣತಿ ಸಮೀಕ್ಷೆ ಅಂಗವಾಗಿ ಹಮ್ಮಿಕೊಂಡ ಜನಗಣ ತಿದಾರರಿಗೆ ಕ್ಷೇತ್ರ ತರಬೇತಿ ಕಾಯ ್ಕ್ರಮದಲ್ಲಿ ತಹಶೀಲ್ದಾರ್ ಭೀಮ ರಾಯ ಬಿ.ರಾಮಸಮುದ್ರ ಮಾತ ನಾಡಿ ಏ.15 ರವರೆಗೆ ಸ್ವಯಂ ಜನಗಣತಿಗೆ ಅವಕಾಶ ನೀಡಲಾಗಿದು ಸಾರ್ವಜನಿಕರು 34 ಅಂಶಗಳ ತಮ್ಮ ಸ್ವ ವಿವಾರಗಳನ್ನು ಮೋಬೈ ಲ್ ಆಫ್ ಮೂಲಕ ದಾಖಲಿಸಿ ಸ್ವಯಂ ಗಣತಿಯನ್ನು ಮಾಡಿಕೊ ಳ್ಳುವುದಕ್ಕೆ ಅವಕಾಶ ನೀಡಲಾಗಿದೆ ಅದ್ದರಿಂದ ಮೊದಲು ಗಣತಿದಾರರು ತಮ್ಮ ವ್ಯಾಪ್ತಿಯಲ್ಲಿ ಬರುವ ಮನೆಗಳವರಿಗೆ ಸ್ವಯಂ ಜನಗಣತಿ ಮಾಡಿಕೊಳ್ಳುವಂತೆ ತಿಳಿಸಿ ಮಾಹಿತಿ ನೀಡಿದಲ್ಲಿ ಜನಗಣತಿ ಮಾಡುವುದಕ್ಕೆ ಹೆಚ್ಚಿನ ಅನುಕೂಲವಾಗುತ್ತದೆ ಏ.16 ರಿಂದ ಜನಗಣತಿದಾರರು ಮೊದಲು ಗ್ರಾಮದಲ್ಲಿನ ಜಿ.ಪಿ.ಎಸ್. ಮಾಡಿ ರುವ ತಮ್ಮ ವ್ಯಾಪ್ತಿಗೆ ನೀಡಲಾ ಗಿರುವ ಪ್ರದೇಶಗಳಲ್ಲಿನ ಮನೆಗಳಿಗೆ ಸಂಖ್ಯೆಗಳನ್ನು ನೀಡಬೇಕು ನಂತರ ಮನೆಯಲ್ಲಿರುವ ಜನರಿಂದ ಸಂಪೂರ್ಣವಾದ ಮಾಹಿತಿಯನ್ನು ಸಂಗ್ರಹಿಸಿ ಮೋಬೈಲ್ ಆಫ್‌ನಲ್ಲಿ ದಾಖಲಿಸಿಕೊಳ್ಳಬೇಕು ಹಾಗೂ ಜನಗಣತಿಯನ್ನು ಯಶಸ್ವಿಗೊಳಿಸಬೇಕು ಎಂದು ತಿಳಿಸಿದರು.

ರಾಜಲದಿನ್ನಿ,ನಂದಿಹಾಳ್, ಯರಮಲದೊಡ್ಡಿ, ಗ್ರಾಮಗಳಲ್ಲಿನ ಸಾರ್ವಜನಿಕರಿಗೆ ಸ್ವಯಂ ಗಣತಿ ಕುರಿತು ಮಾಹಿತಿ ನೀಡಲಾಯಿತು.

ಜನಗಣತಿ ತರಬೇತಿದಾರರಾದ ಚನ್ನಬಸವಮಾಡಗಿರಿ ಸೇರಿದಂತೆ ಗಣತಿದಾರರು ಭಾಗವಹಿಸಿದರು.

ಆಶ್ರಯ ಯೋಜನೆಯಡಿಯಲ್ಲಿ ನಿವೇಶನ ಹಂಚಿಕೆ ವಿಳಂಬ, ಅಸಮರ್ಪಕ ಡೆಬ್ರಿ ನಿರ್ವಹಣೆಗೆ ಸಚಿವ ಪ್ರಿಯಾಂಕ್ ಖರ್ಗೆ ಆಕ್ರೋಶ

ಕಲಬುರಗಿ,,ಏ.13-

2005-06ನೇ ಸಾಲಿನಿಂದ ಆಶ್ರಯ ಯೋಜನೆಯಡಿ ಪಲ್ಲಾಪುರ-ಜಫರಾಬಾದ್ ಬಡಾವಣೆಯಲ್ಲಿ ಆಯ್ಕೆಯಾದ ಫಲಾನುಭವಿಗಳಿಗೆ ನಿರ್ಮಿಸಲಾಗುತ್ತಿರುವ 695 ಮನೆಗಳ ಕಾಮಗಾರಿ ವಿಳಂಬವಾಗಿರುವುದಕ್ಕೆ ಗ್ರಾಮೀಣಾಭಿವೃದ್ಧಿ ಹಾಗೂ ಪಂಚಾಯತ್ ರಾಜ್ ಮತ್ತು ಕಲಬುರಗಿ ಜಿಲ್ಲಾ ಉಸ್ತುವಾರಿ ಸಚಿವ ಪ್ರಿಯಾಂಕ್ ಖರ್ಗೆ ತೀವ್ರ ಅಸಮಾಧಾನ ವ್ಯಕ್ತಪಡಿಸಿದರು.



ನಗರದ ಮಹಾನಗರ ಪಾಲಿಕೆ ಸಭಾಂಗಣದಲ್ಲಿ ನಡೆದ ಪ್ರಗತಿ ಪರಿಶೀಲನಾ ಸಭೆಯಲ್ಲಿ ಮಾತನಾಡಿದ ಅವರು, ಕಾಮಗಾರಿಗೆ ಸಂಬಂಧಿಸಿದ ಎಲ್ಲಾ ಅಡೆತಡೆಗಳನ್ನು ತಕ್ಷಣ ಪರಿಹರಿಸಿ, ಮೂಲಭೂತ ಸೌಕರ್ಯಗಳ ಪರಿಶೀಲನೆ ನಡೆಸಿ ಹಕ್ಕುಪತ್ರ ವಿತರಣೆಗೆ ಅಗತ್ಯ ಕ್ರಮ ಕೈಗೊಳ್ಳಬೇಕು ಎಂದು ಅಧಿಕಾರಿಗಳಿಗೆ ಕಟ್ಟುನಿಟ್ಟಿನ ಸೂಚನೆ ನೀಡಿದರು.

ಅಧಿಕಾರಿಗಳ ಮಾಹಿತಿ ಪ್ರಕಾರ, 695 ನಿವೇಶನಗಳಲ್ಲಿ 652 ಮನೆಗಳ ನಿರ್ಮಾಣಕ್ಕೆ ಕಾರ್ಯಾದೇಶ ನೀಡಲಾಗಿದ್ದರೂ ಅನುದಾನ ಕೊರತೆಯಿಂದ ಕಾಮಗಾರಿ ಸ್ಥಗಿತಗೊಂಡಿತ್ತು. ಬಳಿಕ ಕೆಕೆಆರ್‌ಡಿಬಿ ವತಿಯಿಂದ 13 ಕೋಟಿ ರೂ. ಅನುದಾನ ಬಿಡುಗಡೆಗೊಂಡು ಕಾಮಗಾರಿ ಪುನರಾರಂಭಗೊಂಡಿದೆ. ಜಮೀನು ದಾಖಲೆ ಹಾಗೂ ಹಕ್ಕುಪತ್ರ ತಿದ್ದುಪಡಿ ಸಮಸ್ಯೆಗಳು ಇನ್ನೂ ಬಾಕಿಯಿವೆ ಎಂದು ತಿಳಿಸಿದರು.

ಸಭೆಗೆ ತಡವಾಗಿ ಆಗಮಿಸಿದ ಅಧಿಕಾರಿಗಳನ್ನು ಸಚಿವರು ತರಾಟೆಗೆ ತೆಗೆದುಕೊಂಡು, ಸಭಾಂಗಣದಿಂದ ಹೊರಹಾಕಿ ಅಮಾನತು ಮಾಡಲು ಸೂಚಿಸಿದರು.

ನಗರದ ಸ್ವಚ್ಛತೆ ಕುರಿತು ಕಿಡಿಕಾರಿದ ಅವರು, ರಿಂಗ್‌ರೋಡ್ ಸುತ್ತಮುತ್ತ ಕಸ, ಪ್ಲಾಸ್ಟಿಕ್ ಹಾಗೂ ನಿರ್ಮಾಣ ಅವಶೇಷಗಳನ್ನು ಸುರಿಯುತ್ತಿರುವುದನ್ನು ಗಂಭೀರವಾಗಿ ಪರಿಗಣಿಸಿ, ತಕ್ಷಣ ಕ್ರಮ ಕೈಗೊಳ್ಳುವಂತೆ ಸೂಚಿಸಿದರು. ಸ್ವಚ್ಛತೆ ಸರಿಯಾಗಿ ನಿರ್ವಹಿಸದಿದ್ದರೆ ಅಭಿವೃದ್ಧಿ ಯೋಜನೆಗಳಿಗೆ ಅನುದಾನ ತರಲು ಸಾಧ್ಯವಿಲ್ಲ ಎಂದು ಎಚ್ಚರಿಸಿದರು.

ಆಸ್ತಿ ತೆರಿಗೆ ವಿಚಾರದಲ್ಲಿಯೂ ಕಠಿಣ ನಿಲುವು ವ್ಯಕ್ತಪಡಿಸಿದ ಅವರು, ಮೇ ಅಂತ್ಯದೊಳಗೆ ಆಸ್ತಿ ನೋಂದಣಿ ಹಾಗೂ ತೆರಿಗೆ ಪಾವತಿ ಮಾಡದಿದ್ದರೆ ವಿದ್ಯುತ್ ಸಂಪರ್ಕ ಕಡಿತಗೊಳಿಸುವಂತೆ ಸೂಚನೆ ನೀಡಿದರು. ವಸೂಲಾದ ತೆರಿಗೆಯನ್ನು ಸಾರ್ವಜನಿಕರಿಗೆ ಮೂಲಭೂತ ಸೌಲಭ್ಯ ಕಲ್ಪಿಸಲು ಬಳಸಬೇಕು ಎಂದು ಹೇಳಿದರು.

ಇದೇ ವೇಳೆ, ಕಸ ವಿಂಗಡಣೆ, ರೀಸೈಕ್ಲಿಂಗ್, ಜಿಪಿಎಸ್ ಮತ್ತು ಎಐ ತಂತ್ರಜ್ಞಾನ ಬಳಸಿ ಕಸ ಸಂಗ್ರಹ ವಾಹನಗಳ ಮೇಲ್ವಿಚಾರಣೆ ಸೇರಿದಂತೆ ವಿವಿಧ ಕ್ರಮಗಳ ಕುರಿತು ಅಧಿಕಾರಿಗಳು ಸಚಿವರಿಗೆ ಮಾಹಿತಿ ನೀಡಿದರು.

ಮೇ ಅಂತ್ಯದ ವೇಳೆಗೆ ಆಸ್ತಿಗಳ ನೋಂದಣಿ ಮಾಡಿಸಿ :

ಮಹಾನಗರ ಪಾಲಿಕೆ ವ್ಯಾಪ್ತಿಯ ಆಸ್ತಿಗಳಿಗೆ ಮೇ ಅಂತ್ಯದ ವೇಳೆಗೆ ತೆರಿಗೆ ಪಾವತಿಸಿ ನೋಂದಣಿ ಮಾಡಿಸಿಕೊಳ್ಳದೇ ಇದ್ದರೆ ಅಂತಹ ಆಸ್ತಿಗಳ ವಿದ್ಯುತ್ ಸಂಪರ್ಕ ಕಡಿತಗೊಳಿಸಲಾಗುವುದು ಎಂದು ಆಸ್ತಿದಾರರಿಗೆ ಹೇಳಿ ಎಂದು ಸಚಿವ ಪ್ರಿಯಾಂಕ್ ಖರ್ಗೆ ಅಧಿಕಾರಿಗಳಿಗೆ ಸೂಚಿಸಿದರು.

ಮುಂದುವರೆದು, ಹಾಗೆ ವಸೂಲಾದ ತೆರಿಗೆಯಲ್ಲಿ ಒಂದು ರೂಪಾಯಿ ಕೂಡಾ ರಾಜ್ಯ ಸರ್ಕಾರಕ್ಕೆ ಹೋಗುವುದಿಲ್ಲ. ಆ ಹಣವನ್ನು ಸಾರ್ವಜನಿಕರಿಗೆ ಮೂಲಭೂತ ಸೌಲಭ್ಯ ಒದಗಿಸಲು ಬಳಸಿಕೊಳ್ಳಬೇಕು. ಆಸ್ತಿ ತೆರಿಗೆ ವಸೂಲು ವಿಚಾರದಲ್ಲಿ ಯಾವ ಒತ್ತಡಕ್ಕೂ ಮಣಿಯಬಾರದು ಎಂದು ಅವರು ಒತ್ತಿ ಹೇಳಿದರು.

ಮಹಾನಗರ ಪಾಲಿಕೆಯ 2025-26 ಸಾಲಿನ ಜೋನ್ 1 ರ ವಾರ್ಷಿಕ ತೆರಿಗೆ ಬೇಡಿಕೆ 26.ಕೋಟಿ ರೂ. ಇತ್ತು ಅದರಲ್ಲಿ 20 ಕೋಟಿ ರೂ. ವಸೂಲಾಗಿದೆ. ಜೋನ್ 2 ರಲ್ಲಿ 20 ಕೋಟಿ ರೂ. ಬೇಡಿಕೆ ಇತ್ತು ಅದರಲ್ಲಿ 17 ಕೋಟಿ ರೂ. ವಸೂಲಾಗಿದೆ ಹಾಗೂ ಜೋನ್ 3 ರಲ್ಲಿ 9 ಕೋಟಿ ರೂ. ಬೇಡಿಕೆ ಇತ್ತು. ಅದರಲ್ಲಿ 7 ಕೋಟಿ ರೂ. ವಸೂಲಾಗಿದೆ ಎಂದು ಅಧಿಕಾರಿಗಳು ಮಾಹಿತಿ ನೀಡಿದರು.

ನಾಗರಿಕರು ಕೂಡಾ ಆನ್ ಲೈನ್ ನಲ್ಲಿ ನೇರವಾಗಿ ನೋಂದಣಿ ಮಾಡಿಕೊಳ್ಳುವ ಅವಕಾಶ ನೀಡಲಾಗಿದೆ. ಮಹಾನಗರ ಪಾಲಿಕೆಯಲ್ಲಿ ಪ್ರಸ್ತುತ 1297 ಅರ್ಜಿಗಳನ್ನು ಸ್ವೀಕರಿಸಲಾಗಿದೆ ಎಂದು ಕಮೀಷನರ್ ಹೇಳಿದರು. ಆಗ ಈ ಕುರಿತು ಸಾರ್ವಜನಿಕರಿಗೆ ಸರಿಯಾದ ಮಾಹಿತಿ ಒದಗಿಸಿ ಎಂದು ಸಚಿವರು ಸೂಚಿಸಿದರು.

ಅಮೃತ್ ಮಿತ್ರ ಯೋಜನೆಯಡಿಯಲ್ಲಿ ನಗರದ ಉದ್ಯಾನವನಗಳ ನಿರ್ವಹಣೆಗೆ ಸ್ವಸಹಾಯ ಗುಂಪುಗಳಿಗೆ ವಹಿಸಲಾಗಿದೆ ಎಂದು ಕಮೀಷನರ್ ಅವಿನಾಶ್ ಶಿಂಧೆ ಸಚಿವರಿಗೆ ವಿವರಿಸಿ ಪ್ರಸ್ತುತ ಸದಾಶಿವನಗರ ಗಾರ್ಡನ್, ಹಸಿರು ಉದ್ಯಾನ, ಸ್ವಾಮಿ ವಿವೇಕಾನಂದ ಗಾರ್ಡನ್, ಅಕ್ಕಮಹಾದೇವಿ ನಗರ ಉದ್ಯಾನಗಳು ಸ್ವಸಹಾಯ ಗುಂಪುಗಳ ಅಡಿಯಲ್ಲಿ ನಡೆಯುತ್ತಿವೆ ಎಂದರು.

ಮನೆ ಮನೆಗೆ ಹೋಗಿ ಕಸ ಸಂಗ್ರಹ ಮಾಡುವ ವಾಹನಗಳಿಗೆ ಅಳವಡಿಸಲಾಗಿರುವ ಜಿಪಿಎಸ್ ಗೆ ಎಐ ತಂತ್ರಜ್ಞಾನ ಬಳಸಿಕೊಂಡು ಕಂಟ್ರೋಲ್ ರೂಮಿನಿಂದಲೇ ಅಂತಹ ವಾಹನಗಳನ್ನು ಟ್ರ್ಯಾಕ್ ಮಾಡಬಹುದಾಗಿದೆ. ಜೊತೆಗೆ ಒಟ್ಟು 100 ಸಿಸಿಟಿವಿ ಕ್ಯಾಮೆರಾ ಕೂಡಾ ಅಗತ್ಯ ಸ್ಥಳಗಳಲ್ಲಿ ಅಳವಡಿಸಲಾಗಿದ್ದು, ಈ ಮೂಲಕ ಮಹಾನಗರ ಪಾಲಿಕೆ ವ್ಯಾಪ್ತಿಯ ಬಡಾವಣೆಗಳ ಕಸ ಸಂಗ್ರಹ ಮಾಡುವ ವಾಹನಗಳ ಟ್ರ್ಯಾಕ್ ಮಾಡಲಾಗುತ್ತಿದೆ. ಇದಕ್ಕೆ 4 ಕೋಟಿ ರೂ. ಅನುದಾನ ಬಿಡುಗಡೆ ಮಾಡಲಾಗಿದೆ ಎಂದು ಅಧಿಕಾರಿಗಳು ಸಚಿವರಿಗೆ ವಿವರಿಸಿದರು.

ಶಾಸಕರಾದ ಅಲ್ಲಮಪ್ರಭು ಪಾಟೀಲ್, ಕನೀಝ್ ಫಾತೀಮಾ, ಎಂಎಲ್‌ಸಿ ಜಗದೇವ ಗುತ್ತೇದಾರ, ತಿಪ್ಪಣ್ಣಪ್ಪ ಕಮಕನೂರ, ಮಹಾಪೌರ ವರ್ಷಾ ಜಾನೆ, ಪಾಲಿಕೆ ಆಯುಕ್ತ ಅವಿನಾಶ್ ಶಿಂಧೆ, ಸಿಇಓ ಭಂವರ್ ಸಿಂಗ್ ಮೀನಾ ಸೇರಿದಂತೆ ಇತರೆ ಅಧಿಕಾರಿಗಳಿದ್ದರು.

ಜ್ಯೋತಿ ಬಾಪುಲೆ ಭಾರತದ ಶ್ರೇಷ್ಠ ಸಮಾಜ ಸುಧಾರಕ : ಡಾ.ಎರಿಸ್ವಾಮಿ ಎಚ್.



ಕನಕಗಿರಿ,ಏ.13-

ಮಹಾತ್ಮ ಜ್ಯೋತಿ ಬಾಪುಲೆ ಅವರು 19ನೇ ಶತಮಾನದ ಭಾರತದ ಶ್ರೇಷ್ಠ ಸಮಾಜ ಸುಧಾರಕರಾಗಿದ್ದು, ಅಂಧಶ್ರದ್ಧೆ, ಜಾತಿ ಪದ್ಧತಿ, ಅಸ್ಪೃಶ್ಯತೆ ಮತ್ತು ಅಸಮಾನತೆಯ ವಿರುದ್ಧ ಧ್ವನಿ ಎತ್ತಿ ಅಗ್ರಗಣ್ಯ ಸ್ಥಾನದಲ್ಲಿ ನಿಂತಿದ್ದಾರೆ ಎಂದು ತಾವರಗೇರಾ ಬುದ್ಧ ವಿಹಾರ ಸ್ಪರ್ಧಾತ್ಮಕ ಪರೀಕ್ಷೆಗಳ ತರಬೇತಿ ಕೇಂದ್ರ ಡಾ.ಎರಿಸ್ವಾಮಿ ಎಚ್. ಹೇಳಿದರು.

ಇಲ್ಲಿನ ಪಂಪಣ್ಣ ಶರಣಪ್ಪ ಗುಗ್ಗಳಶೆಟ್ರ ಕಾಲೇಜಿನಲ್ಲಿ ಭಾನುವಾರ ನಡೆದ ಶಿಕ್ಷಣ ಕ್ರಾಂತಿಯ ರೂವಾರಿ ಮಹಾತ್ಮ ಜ್ಯೋತಿರಾವ್ ಫುಲೆ ಅವರ 199ನೇ ಜನ್ಮ ಜಯಂತಿ, ವಿಶೇಷ ಉಪನ್ಯಾಸ ಮತ್ತು ಸ್ಪರ್ಧಾತ್ಮಕ ಪರೀಕ್ಷೆಗಳ ತರಬೇತಿ ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದರು.

ಫುಲೆ ಅವರು ಕೇವಲ ಶಿಕ್ಷಣ ತಜ್ಞರಾಗಿರದೆ, ಒಬ್ಬ ಮಹಾನ್ ಮಾನವತಾವಾದಿಯಾಗಿದ್ದರು. ತಮ್ಮ ಪತ್ನಿ ಸಾವಿತ್ರಿಬಾಯಿ ಅವರಿಗೆ ತಾವೇ ಶಿಕ್ಷಣ ನೀಡಿ, ಅವರನ್ನು ದೇಶದ ಮೊದಲ ಮಹಿಳಾ ಶಿಕ್ಷಕಿಯನ್ನಾಗಿ ಮಾಡಿದರು. ಸಮಾಜದ ತೀವ್ರ ವಿರೋಧದ ನಡುವೆಯೂ ಈ ದಂಪತಿಗಳು ಶೋಷಿತರ ಶಿಕ್ಷಣಕ್ಕಾಗಿ ಶ್ರಮಿಸಿದರು ಎಂದು ತಿಳಿಸಿದರು. ಪ್ರಾಂಶುಪಾಲ ಬಜರಂಗ ಬಲಿ ಮಾತನಾಡಿದರು.

ಕುಷ್ಟಗಿ ವಕೀಲರಾದ ಬೆಟ್ಟಪ್ಪ ಯತ್ನಟ್ಟಿ ಬಸವಂತಪ್ಪ ಚೌವ್ಹಾಣ ಪ್ರಾಧ್ಯಪಕ ರಕ್ಷಿತ್.ಎ, ವೀರೇಶ್ ಕೆಂಗಲ್, ಸರ್ವಮಂಗಳಮ್ಮ.ಟಿ.ಆರ್, ಹಿರಿಯ ಉಪನ್ಯಾಸಕ ಅಮರೇಶ ವೆಂಕಟಾಪುರ, ವಿನಯ್ ಕುಮಾರ್, ವಿಜಯ್ ಸರೋದೆ, ಬಸವರಾಜ್ ಚಿಗರಿ, ಹಲಿಗೆಮ್ಮ, ಬೋರಯ್ಯ ಸೇರಿದಂತೆ ಇತರರು ಇದ್ದರು. ಬಾಲಪ್ಪ ಕುರಿ ನಿರೂಪಿಸಿದರು, ವಿದ್ಯಾರ್ಥಿನಿ ಮೀನಾಕ್ಷಿ ಪ್ರಾಥಿಸಿದರು, ಸಂಗಮೇಶ್ ಸ್ವಾಗತಿಸಿದರು.

ಜಗಜೀವನ ರಾಮ್ ಅವರು ರೈತ, ದಲಿತ, ಕಾರ್ಮಿಕರ ಪರ ಹೋರಾಡಿದ ಚೇತನ : ತಿಪ್ಪಣ್ಣ ಕಮಕನೂರು

ವಾಡಿ,ಏ.13-

ಅಧಿಕಾರದಲ್ಲಿದ್ದರೂ ರೈತ, ದಲಿತ ಹಾಗೂ ಕಾರ್ಮಿಕರ ಪರ ಹೋರಾಡಿದ ಮಹಾನ್ ಚೇತನ ಬಾಬು ಜಗಜೀವನ ರಾಮ್ ಎಂದು ವಿಧಾನ ಪರಿಷತ್ ಸದಸ್ಯ ತಿಪ್ಪಣ್ಣಪ್ಪ ಕಮಕನೂರು ಹೇಳಿದರು.



ಪಟ್ಟಣದ ಜಾಂಬವೀರ ಕಾಲೋನಿಯಲ್ಲಿ ಡಾ. ಬಾಬು ಜಗಜೀವನ ರಾಮು ಜಯಂತೋತ್ಸವ ಸಮಿತಿ, ಮಾದಿಗ ಸಮಾಜ ಹಾಗೂ ಆದಿ ಜಾಂಬವ ತರುಣ ಸಂಘದ ಸಹಯೋಗದಲ್ಲಿ ನಡೆದ 119ನೇ ಜಯಂತ್ಯೋತ್ಸವ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ಜಗಜೀವನ ರಾಮು ಅವರು ಉಪ ಪ್ರಧಾನಿಯಾಗಿದ್ದರೂ, ಈ ಸಮುದಾಯದ ವ್ಯಕ್ತಿ ಪ್ರಧಾನಿಯಾಗಬೇಕು ಎಂಬ ಆಶಯ ವ್ಯಕ್ತಪಡಿಸಿದರು.

ಮಾದಿಗ ಸಮುದಾಯದ ಬೇಡಿಕೆಯಂತೆ ಕಲ್ಯಾಣ ಮಂಟಪಕ್ಕೆ ಸಚಿವ ಪ್ರಿಯಾಂಕ್ ಖರ್ಗೆ ವಿಶೇಷ ಅನುದಾನದಡಿ ಮೊದಲ ಹಂತದಲ್ಲಿ 50 ಲಕ್ಷ ರೂ. ಮಂಜೂರು ಮಾಡುವುದಾಗಿ ಹೇಳಿದ್ದು, ತಮ್ಮ ವತಿಯಿಂದ 10 ಲಕ್ಷ ರೂ. ನೀಡುವುದಾಗಿ ಭರವಸೆ ನೀಡಿದರು. ಕಾರ್ಯಕ್ರಮದಲ್ಲಿ ವಿಧಾನ ಪರಿಷತ್ ಸದಸ್ಯ ಜಗದೇವ ಗುತ್ತೇದಾರ ಮಾತನಾಡಿ, ಜಗಜೀವನ ರಾಮು ಅವರು ಕೃಷಿ ಮತ್ತು ನೀರಾವರಿ ಕ್ಷೇತ್ರಕ್ಕೆ ಮಹತ್ತರ ಸೇವೆ ಸಲ್ಲಿಸಿದ್ದಾರೆ ಎಂದರು. ಆದಿ ಜಾಂಬವ ಶಿಕ್ಷಣ ಸಂಸ್ಥೆಗೆ 10 ಲಕ್ಷ ರೂ. ಅನುದಾನ ನೀಡುವುದಾಗಿ ಘೋಷಿಸಿದರು.

ಜಿ.ಪಂ. ಮಾಜಿ ವಿರೋಧ ಪಕ್ಷದ ನಾಯಕರಾದ ಶಿವಾನಂದ ಪಾಟೀಲ ಮರತೂರ, ಕಾಂಗ್ರೆಸ್‌ನ ಮುಖಂಡರಾದ ಶಾಮ ನಾಟೇಕರ, ಲಿಂಗರಾಜ ತಾರಫೈಲ್, ಸ್ಥಳೀಯ ಬಿ.ಜೆ.ಪಿ ಅಧ್ಯಕ್ಷ ವೀರಣ್ಣ ಯಾರಿ ಮಾತನಾಡಿದರು. ಮಹಲ ರೋಜಾದ ಶ್ರೀ ಮಲ್ಲಿಕಾರ್ಜುನ ಮುತ್ಯಾ, ಇಮದಾಪುರದ ಶ್ರೀ ಸಾಯಪ್ಪ ಮುತ್ಯಾ ಸಾನಿದ್ಯ ವಹಿಸಿದ್ದರು. ಡಾ ಬಾಬು ಜಗಜೀವನ ರಾಮು ಜಯಂತೋತ್ಸವ ಸಮಿತಿ ಅಧ್ಯಕ್ಷ ಶರಣು ಮರತೂರ ಅಧ್ಯಕ್ಷತೆ ವಹಿಸಿದ್ದರು. ಮಾದಿಗ ಸಮಾಜದ ಅಧ್ಯಕ್ಷ ರಾಜು ಮುಕ್ಕಣ್ಣ ಪ್ರಾಸ್ತಾವಿಕ ನುಡಿಗಳನ್ನಾಡಿದರು.

ಏ.5 ರಂದು ರಾಜ್ಯ ಸರ್ಕಾರ ನೀಡುವ 'ಡಾ. ಬಾಬು ಜಗಜೀವನ ರಾಮು' ಪ್ರಶಸ್ತಿ ಪುರಸ್ಕೃತರಾದ ಜಾನಪದ ಕಲಾವಿದ ಡಿಂಗ್ರಿ ನರಸಪ್ಪ ಅವರಿಗೆ ವಿಶೇಷ ಸನ್ಮಾನ ಮಾಡಲಾಯಿತು.

ಈ ಸಂದರ್ಭದಲ್ಲಿ ಜಯಂತ್ಯೋತ್ಸವ ಸಮಿತಿ ಗೌರವ ಅಧ್ಯಕ್ಷ ಚಂದಪ್ಪ ಕಟ್ಟಿಮನಿ, ವಾಡಿ ಅಪರಾಧ ವಿಭಾಗದ ಪಿಎಸ್‌ಐ ರೇಣುಕಾ ಉಡಗಿ, ಅರ್ಜುನ ಕಾಳೆಕರ, ಭೀಮರಾಯ ದೊರಿ, ಬಸವರಾಜ ತುಮಕೂರ, ಗುರುನಾಥ ಮಣೆಗಿರ, ಭೀಮಣ್ಣ ಹವಾಲ್ದಾರ, ಬಸವರಾಜ ಬೂಧಿಹಾಳ, ಶರಣಬಸಪ್ಪ ರಾವೂರ, ಶಿವಕುಮಾರ, ಮಲ್ಲಿಕಾರ್ಜುನ ಮುದ್ನಾಳ, ಜಯಂತ್ಯೋತ್ಸವ ಸಮಿತಿಯ ಕುಮಾರ ರಾಮಚಂದ್ರ ದಾಸ, ಜಗದೀಶ ಮುಕ್ಕನಾಳ, ರಾಜು ರಾಂಪುರಹಳ್ಳಿ, ಶಶಿ ಅರೋಲಿಕರ, ಶಿವಕುಮಾರ ತುಮಕೂರಕರ, ಅನೀಲ ಮುದ್ನಾಳ, ವಿಜಯಕುಮಾರ ಯಲಗಟ್ಟಿ, ಮಲ್ಲಿಕಾರ್ಜುನ ಚಾಮನಳ್ಳಿ, ಚಂದು ಕಾಂಬಳೆ, ಈಶ್ವರ ಹೊಸಮನಿ ಸೇರಿದಂತೆ ಹಲವರಿದ್ದರು.

ಶ್ರೀಕಾಂತ ಬಿರಾಳ ಸ್ವಾಗತಿಸಿದರು. ಆರ್.ಜೆ.ಮಂಜು ನಿರೂಪಣೆ ಮಾಡಿದರು, ರಿಚರ್ಡ್ ಮಾರೆಡ್ಡಿ, ವಂದಿಸಿದರು.



ದಾನಿ ಚಂದ್ರವ್ವ ಹತ್ಯೆ ವಿಷಾದನೀಯ

ತೇರದಾಳ,ಏ.13-

ಇಲ್ಲಿನ ಅಲ್ಲಮಪ್ರಭುದೇವರ ಕಲ್ಯಾಣ ಮಂಟಪದಲ್ಲಿ ದಾನಿ ದಿ. ಚಂದ್ರವ್ವ ಜಗದಾಳ ಅವರಿಗೆ ಶ್ರದ್ಧಾಂಜಲಿ ಸಲ್ಲಿಸಲಾಯಿತು.


ಜಮಖಂಡಿ ಶಾಸಕ ಜಗದೀಶ ಗುಡಗುಂಟಿ ಮಾತನಾಡಿ, ಇಡೀ ಜೀವನವನ್ನೇ ಪರೋಪಕಾರಕ್ಕಾಗಿ ತ್ಯಾಗ ಮಾಡಿದ ಮಹಾದಾನಿ ಚಂದ್ರವ್ವ ಜಗದಾಳ ಅವರ ಹತ್ಯೆಯಾಗಿದ್ದು ವಿಷಾದನೀಯ. ನಮ್ಮ ಆಯಸ್ಸು ಎಷ್ಟಿತ್ತು? ಎಷ್ಟು ವರ್ಷ ಬದುಕಿದ್ದೇವೆ ಎನ್ನುವುದಿಕ್ಕಿಂತ ಅದನ್ನು ಸಮಾಜದ ಒಳಿತಿಗಾಗಿ ಹೇಗೆ ಬಳಸುತ್ತೇವೆ ಎನ್ನುವುದು ಮುಖ್ಯ. ಪರೋಪಕಾರಿ ಜೀವನ ನಡೆಸಬೇಕು. ಅದಕ್ಕೆ ಚಂದ್ರವ್ವ ಜಗದಾಳ ಅವರೇ ಮಾದರಿ ಎಂದು ಹೇಳಿದರು. ಮುಖಂಡ ಪ್ರವೀಣ ನಾಡಗೌಡ ಮಾತನಾಡಿ, ಚಂದ್ರವ್ವ ಅವರು ನಿಸ್ವಾರ್ಥದಿಂದ ದೇವಸ್ಥಾನಗಳಿಗೆ ದೇಣಿಗೆ ನೀಡುವ ಮೂಲಕ ಸಾರ್ವಜನಿಕ ವಲಯದಲ್ಲಿ ಎಲ್ಲರ ಪ್ರೀತಿಗೆ ಪಾತ್ರರಾಗಿದ್ದರು ಎಂದು ಸ್ಮರಿಸಿದರು.

ಪುರಸಭೆ ಮಾಜಿ ಅಧ್ಯಕ್ಷ ಬಸವರಾಜ ಬಾಳಿಕಾಯಿ, ಜಿಲ್ಲಾ ಪಂಚಾಯಿತಿ ಮಾಜಿ ಸದಸ್ಯ ದೇವಲ ದೇಸಾಯಿ, ಭೀಮಗೊಂಡ ಸದಲಗಿ, ನಾಗಪ್ಪ ಸನದಿ, ಮಲ್ಲಪ್ಪ ಜಮಖಂಡಿ, ಅಲ್ಲಯ್ಯ ದೊಡಮನಿ, ಅಪ್ಪು ಮಂಗಸೂಳಿ, ಬಸಪರಯ್ಯ ಬಾವಿ ಇದ್ದರು.

ಜಗತ್ತಿನ ಮೊದಲ ವಚನಕಾರ್ತಿ ಅಕ್ಕಮಹಾದೇವಿ ಕುರಿತು ಅನುಭಾವ ಕಾರ್ಯಕ್ರಮ

ಕಲಬುರಗಿ,ಏ.13-

ಬಸವ ಸಮಿತಿಯ ಅನುಭವ ಮಂಟಪ ಹಾಗೂ ಡಾ. ಬಿ.ಡಿ. ಜತ್ತಿ ವಚನ ಅಧ್ಯಯನ ಮತ್ತು ಸಂಶೋಧನಾ ಕೇಂದ್ರದಲ್ಲಿ ಬಸವಾದಿ ಶರಣರ ಸ್ಮರಣಾರ್ಥ ''ಅರಿವಿನ ಮನೆ'' 896ನೇ ದತ್ತಿ ಕಾರ್ಯಕ್ರಮವನ್ನು ರವಿವಾರ ಆಯೋಜಿಸಲಾಯಿತು.



ಕಾರ್ಯಕ್ರಮದಲ್ಲಿ ಅನುಭಾವ ನೀಡಿದ ಶರಣ ಚಿಂತಕಿ ಜಯಶ್ರೀ ಚಟ್ನಳ್ಳಿ ಅವರು ಅಕ್ಕಮಹಾದೇವಿ ಅವರನ್ನು ಜಗತ್ತಿನ ಮೊದಲ ವಚನಕಾರ್ತಿಯಾಗಿ ವಿವರಿಸಿದರು. ಶಿವಮೊಗ್ಗ ಜಿಲ್ಲೆಯ ಉಡುತಡಿ ಗ್ರಾಮದಲ್ಲಿ ಜನಿಸಿದ ಅಕ್ಕಮಹಾದೇವಿ ಯಲ್ಲಿ ಬಾಲ್ಯದಲ್ಲೇ ಅಧ್ಯಾತ್ಮ ಚಿಂತನೆಗಳ ಲಕ್ಷಣಗಳು ಗೋಚರಿಸುತ್ತಿದ್ದವು ಎಂದರು.

ಗುರುಲಿಂಗ ದೇವರಿಂದ ಶಿಕ್ಷಣ ಮತ್ತು ಸಂಸ್ಕಾರ ಪಡೆದ ಅಕ್ಕಮಹಾದೇವಿ ''ನೀನೆಂಬುದು ದೇವರ ಸ್ವರೂಪ'' ಎಂಬ ಆತ್ಮಜ್ಞಾನವನ್ನು ಅಳವಡಿಸಿಕೊಂಡಳು. ಲಿಂಗದೀಕ್ಷೆಯ ಮಹತ್ವವನ್ನು ವಿವರಿಸಿದ ಅವರು, ಗುರುದಿಂದ ದೀಕ್ಷೆ ಪಡೆಯುವುದು ಜೀವನದ ಎರಡನೇ ಹುಟ್ಟಾಗಿದ್ದು, ಪಂಚೇಂದ್ರಿಯಗಳ ಸಂಸಾರ ನಿಸ್ಸಾರವಾದದ್ದು ಎಂದು ಹೇಳಿದರು.

ಯೌವನದಲ್ಲಿ ಮದುವೆಗೆ ಒತ್ತಾಯ ಬಂದಾಗ ಚೆನ್ನಮಲ್ಲಿಕಾರ್ಜುನನೇ ತನ್ನ ಪತಿ ಎಂದು ಘೋಷಿಸಿದ ಅಕ್ಕಮಹಾದೇವಿ, ಬಳಿಕ ಕೌಶಿಕ ಮಹಾರಾಜನೊಂದಿಗೆ ವಿವಾಹವಾದರೂ ಕರಾರು ಪಾಲನೆಯಿಲ್ಲದ ಕಾರಣ ಅವನನ್ನು ತೊರೆದು ಕಲ್ಯಾಣದತ್ತ ಹೊರಟಳು ಎಂದು ವಿವರಿಸಿದರು.

''ಹಸಿವಾದಡೆ ಭಿಕ್ಷಾನ್ನ, ತೃಷೆಯಾಗಿದಡೆ ನೀರಿನ ಮೂಲಗಳು, ಶಯನಕ್ಕೆ ಹಾಳಾದ ದೇವಾಲಯಗಳೇ ಸಾಕು'' ಎಂಬ ಆಕೆಯ ವೈರಾಗ್ಯ ಜೀವನವನ್ನು ಉಲ್ಲೇಖಿಸಿ, ಪ್ರಕೃತಿಯಲ್ಲಿಯೇ ದೇವರನ್ನು ಕಂಡ ಮಹನೀಯಳಾಗಿದ್ದಾಳೆ ಎಂದು ಹೇಳಿದರು.

ನಂತರ ಅಲ್ಲಮಪ್ರಭು ಅವರೊಂದಿಗೆ ನಡೆದ ಸಂವಾದಗಳ ಬಳಿಕ ಕಲ್ಯಾಣದ ಅನುಭವ ಮಂಟಪದಲ್ಲಿ ಆಕೆಗೆ ಸ್ವಾಗತ ನೀಡಲಾಯಿತು ಎಂದು ತಿಳಿಸಿದರು. ಅಕ್ಕಮಹಾದೇವಿ ಅಧ್ಯಾತ್ಮ ಲೋಕದ ವಿಸ್ಮಯ ಎಂದು ಅವರು ಅಭಿಪ್ರಾಯಪಟ್ಟರು.

ಕಾರ್ಯಕ್ರಮದಲ್ಲಿ ಬಸವ ಸಮಿತಿಯ ಅಧ್ಯಕ್ಷರಾದ ಡಾ. ವಿಲಾಸವತಿ ಖೂಬಾ, ಡಾ. ವೀರಣ್ಣ ದಂಡೆ, ದತ್ತಿ ದಾಸೋಹಿಗಳಾದ ಡಾ. ಜಯಶ್ರೀ ದಂಡೆ, ಉದ್ಯಮಿ ರಾಜೇಂದ್ರ ಖೂಬಾ, ಕಾರ್ಯದರ್ಶಿ ಡಾ. ಆನಂದ ಸಿದ್ದಾಮಣಿ, ಡಾ. ಕೆ.ಎಸ್. ವಾಲಿ, ಬಂಡಪ್ಪ ಕೇಸೂರ್, ಶರಣಗೌಡ ಪಾಟೀಲ್ ಪಾಳ, ಶಿವಾನಂದ ಹತ್ತಿ, ಉದ್ದಂಡಯ್ಯ ಸೇರಿದಂತೆ ಹಲವರು ಭಾಗವಹಿಸಿದರು. ಸಾಕ್ಷಿ ಸತ್ಯಂಪೇಟೆ ಕಾರ್ಯಕ್ರಮವನ್ನು ನಿರೂಪಿಸಿದರು.

7 ಕೋಟಿ ವೆಚ್ಚದಲ್ಲಿ ವಾಲಿಬಾಲ್ ಒಳಾಂಗಣ: ಶೀಘ್ರದಲ್ಲೇ ಕಾಮಗಾರಿ ಆರಂಭ

ಕಲಬುರಗಿ,ಏ.13-

ಕ್ರೀಡಾಂಗಣದಲ್ಲಿ ಈಗಾಗಲೇ ವಾಲಿಬಾಲ್ ಹೊರಾಂಗಣವಿದ್ದು, ಅಗತ್ಯ ಸೌಲಭ್ಯಗಳ ಕೊರತೆಯಿದೆ. ಅಲ್ಲದೆ ಮಳೆಗಾಲದಲ್ಲಿ ಅಭ್ಯಾಸಕ್ಕೆ ತೊಂದರೆಯಾಗುತ್ತಿತ್ತು. ರಾಜ್ಯ, ರಾಷ್ಟ್ರೀಯ ಹಾಗೂ ಅಂತರರಾಷ್ಟ್ರೀಯ ಮಟ್ಟದಲ್ಲಿ ಪೈಪೋಟಿ ನೀಡಲು ವಾಲಿಬಾಲ್ ಪಟುಗಳನ್ನು ತರಬೇತಿಗೊಳಿಸಲು ಸಾಧ್ಯವಾಗುತ್ತಿರಲಿಲ್ಲ. ಈಗ ಹೊಸ ವಾಲಿಬಾಲ್ ಒಳಾಂಗಣ ನಿರ್ಮಾಣದಿಂದ ಜಿಲ್ಲೆಯಲ್ಲಿ ಕ್ರೀಡೆಯ ಅಭಿವೃದ್ಧಿ ಹಾಗೂ ಹೊಸ ಪ್ರತಿಭೆಗಳ ತರಬೇತಿಗೆ ಉಪಯುಕ್ತವಾಗಲಿದೆ.

ಹೆಣ್ಣು ಮಕ್ಕಳಿಗೆ ಜಗತ್ತನ್ನು ಮುನ್ನಡೆಸುವ ಶಕ್ತಿ ಇದೆ : ವಿಶ್ವರಾಧ್ಯ ಮಳೇಂದ್ರ ಶಿವಾಚಾರ್ಯರು

ಅಫಜಲಪುರ,

ಕರ್ನಾಟಕ ರಾಜ್ಯ ಬಣಜಿಗ ಸಮಾಜ ಕ್ಷೇಮಾಭಿವೃದ್ಧಿ ಸಂಘ ಹಾಗೂ ಶ್ರೀ ಅಕ್ಕಮಹಾದೇವಿ ಪತ್ತಿನ ಸಹಕಾರ ಸಂಘ ನಿಯಮಿತ ಇವರ ಸಹಯೋಗದಲ್ಲಿ ಅಂತರರಾಷ್ಟ್ರೀಯ ಮಹಿಳಾ ದಿನಾಚರಣೆ ಹಾಗೂ ಅಕ್ಕಮಹಾದೇವಿ ಜಯಂತಿ ಅಂಗವಾಗಿ ಉಚಿತ ಆರೋಗ್ಯ ತಪಾಸಣೆ ಮತ್ತು ರಕ್ತದಾನ ಶಿಬಿರವನ್ನು ಪಟ್ಟಣದ ಶ್ರೀ ಮಳೇಂದ್ರ ಮಠದ ಆವರಣದಲ್ಲಿ ಅರ್ಥಪೂರ್ಣವಾಗಿ ಆಯೋಜಿಸಲಾಯಿತು.



ಕಾರ್ಯಕ್ರಮಕ್ಕೆ ಶ್ರೀ ಮಳೇಂದ್ರ ಮಠದ ಶ್ರೀ ವಿಶ್ವಾರಾಧ್ಯ ಮಳೇಂದ್ರ ಶಿವಾಚಾರ್ಯರು ಸಾನಿಧ್ಯ ವಹಿಸಿ ಆಶೀರ್ವಚನ ನೀಡಿ ಮಾತನಾಡಿದ ಅವರು, ಬಣಜಿಗ ಸಮಾಜದ ವತಿಯಿಂದ ಹಮ್ಮಿಕೊಳ್ಳಲಾಗಿರುವ ಇಂತಹ ಸಮಾಜಮುಖಿ ಕಾರ್ಯಕ್ರಮಗಳು ಶ್ಲಾಘನೀಯವಾಗಿವೆ. ಮಹಿಳೆಯರು ಇಂದು ಎಲ್ಲಾ ಕ್ಷೇತ್ರಗಳಲ್ಲಿ ಮುನ್ನಡೆಯುತ್ತಿದ್ದು, ಹೆಣ್ಣು ಮಕ್ಕಳಿಗೆ ಜಗತ್ತನ್ನು ಮುನ್ನಡೆಸುವ ಶಕ್ತಿ ಇದೆ ಎಂದು ಹೇಳಿದರು.

ಬಣಜಿಗ ಸಮಾಜದ ತಾಲೂಕು ಅಧ್ಯಕ್ಷ ಬಸಣ್ಣ ಗುಣಾರಿ ಮಾತನಾಡಿ, ನಮ್ಮ ಸಮಾಜವು ಹಲವು ವರ್ಷಗಳಿಂದ ಸಮಾಜಮುಖಿ ಕಾರ್ಯಕ್ರಮಗಳನ್ನು ನಿರಂತರವಾಗಿ ಹಮ್ಮಿಕೊಳ್ಳುತ್ತಿದೆ. ಗ್ರಾಮೀಣ ಪ್ರದೇಶದ ಜನರಿಗೆ ಆರೋಗ್ಯ ಸೇವೆಗಳು ತಲುಪಿಸಲು ಇಂತಹ ಉಚಿತ ಶಿಬಿರಗಳು ಬಹಳ ಉಪಯುಕ್ತವಾಗಿವೆ. ಇಂದಿನ ಶಿಬಿರದಲ್ಲಿ 30 ಜನರು ರಕ್ತದಾನ ಮಾಡಿದ್ದು, ಸುಮಾರು 230 ಕ್ಕೂ ಹೆಚ್ಚು ಜನರಿಗೆ ಉಚಿತ ಆರೋಗ್ಯ ತಪಾಸಣೆ ನಡೆಸಿ ಔಷಧಗಳನ್ನು ವಿತರಿಸಲಾಗಿದೆ ಎಂದು ತಿಳಿಸಿದರು. ಶಾಂತಾಬಾಯಿ ಎಂ.ವೈ. ಪಾಟೀಲ ಅವರು ಕಾರ್ಯಕ್ರಮವನ್ನು ಉದ್ಘಾಟಿಸಿದರು. ದೇವಿಕಾ ಶರಣು ಶೆಟ್ಟಿ ಅಧ್ಯಕ್ಷತೆ ವಹಿಸಿದರು. ಅನ್ನಪೂರ್ಣ ಪಾಟೀಲ ಅವರು ಪೂಜೆ ನೆರವೇರಿಸಿದರು. ಲಕ್ಷ್ಮೀ ಜಗದೀಶ ಗುಣಾರಿ ಪ್ರಾಸ್ತಾವಿಕವಾಗಿ ಮಾತನಾಡಿದರು. ಮಹಾನಂದ ಎಸ್. ಮಾಲೀಪಾಟೀಲ ಅವರು ಅಕ್ಕಮಹಾದೇವಿ ವಚನ ಪ್ರಾರ್ಥನೆ ಸಲ್ಲಿಸಿದರು. ಸಾವಿತ್ರಿ ಎಸ್. ರೋಡಗಿ ಭಕ್ತಿಗೀತೆ ಹಾಡಿ ಅನುಭವ ನುಡಿಗಳನ್ನು ಹಂಚಿಕೊಂಡರು. ಕಾರ್ಯಕ್ರಮದಲ್ಲಿ ಅನ್ನಪೂರ್ಣ ಪಾಟೀಲ್ ಸೇರಿದಂತೆ ಅರುಣಾಬಾಯಿ ನೂಲಾ, ಪುಷ್ಪಾವತಿ ಎಸ್. ಟಕ್ಕಳಕಿ, ಸಾವಿತ್ರಿಬಾಯಿ ನಾಕೇದಾರ, ಜಯಶ್ರೀ ಉಪ್ಪಿನ, ಸಿದ್ದಮ್ಮ ಹೈಗೊಂಡೆ, ಪಾತಳಮ್ಮ ಫತಾಟೆ, ಡಾ. ಸಂಗಮೇಶ್ವರಿ ಪ್ರಮೋದ, ಜಗದೇವಿ ಜೇವರ್ಗಿ, ಚನ್ನಮ್ಮ ಜೇವರ್ಗಿ, ಲಕ್ಷ್ಮೀ ಗುಣಾರಿ, ಅಶ್ವಿನಿ ನಿಗಡಿ, ರೇಖಾ ಮಸಳಿ ಸೇರಿದಂತೆ ಅನೇಕರು ಭಾಗವಹಿಸಿದ್ದರು. ವೈದ್ಯರಾದ ಡಾ. ಶರಣಬಸಪ್ಪ ದಾಮಾ, ಡಾ. ರುದ್ರಪ್ಪ ಗುಗವಾಡ, ಡಾ. ವಿ.ಎಸ್. ಸೋಬಾನಿ, ಡಾ. ಸಂಜೀವ ಪಾಟೀಲ ಡಾ. ಅಂಬಿಕಾ ಪಾಟೀಲ ಸೇರಿದಂತೆ ಅನೇಕ ವೈದ್ಯರು ಆರೋಗ್ಯ ತಪಾಸಣೆ ನಡೆಸಿದರು.

ಡಾ.ಅಂಬೇಡ್ಕರ್ 135ನೇ ಜಯಂತಿ ನಿಮಿತ್ತ ನೇತ್ರದಾನ ಶಿಬಿರ

ಕಲಬುರಗಿ,ಏ.13-

ಡಾ.ಬಾಬಾ ಸಾಹೇಬ್ ಅಂಬೇಡ್ಕರ್ ಅವರ 135ನೇ ಜಯಂತೋತ್ಸವದ ಅಂಗವಾಗಿ ''ಡಾ.ಅಂಬೇಡ್ಕರ್ ಅರಿವು ಉತ್ಸವ - 2026'' ಹಿನ್ನಲೆಯಲ್ಲಿ ನೇತ್ರದಾನ ಶಿಬಿರ ಹಾಗೂ ಉಚಿತ ಕನ್ನಡಕ ವಿತರಣಾ ಕಾರ್ಯಕ್ರಮವನ್ನು ಇಂದು ಆಯೋಜಿಸಲಾಯಿತು.

ಕಾರ್ಯಕ್ರಮವನ್ನು ಶ್ರೀ ಶರಣಬಸವೇಶ್ವರ ವಿದ್ಯಾವರ್ಧಕ ಸಂಘ ಹಾಗೂ ಶರಣಬಸವ ವಿಶ್ವವಿದ್ಯಾಲಯದ ಕುಲಾಧಿಪತಿಗಳಾದ ಡಾ.ದಾಕ್ಷಾಯಿಣಿ ಎಸ್.ಅಪ್ಪ ಅವರು ಸಾನಿಧ್ಯ ವಹಿಸಿ ಉದ್ಘಾಟಿಸಿದರು.

ಮುಖ್ಯ ಅತಿಥಿಗಳಾಗಿ ನೇತ್ರ ವಿಭಾಗದ ಪ್ರಾಧ್ಯಾಪಕಿ ಹಾಗೂ ವಿಭಾಗದ ಮುಖ್ಯಸ್ಥರಾದ ಡಾ.ಕವಿತಾ ಪಾಟೀಲ್, ಜಿಲ್ಲಾ ಆರ್‌ಸಿಎಚ್ ಅಧಿಕಾರಿಗಳಾದ ಡಾ.ಸಿದ್ರಾಮಪ್ಪ ಪಾಟೀಲ್ ಸೇರಿದಂತೆ ಹಲವರು ಭಾಗವಹಿಸಿದರು.

ಇದೇ ವೇಳೆ ಸೋಮಶೇಖರ್ ಮೇಲಿನಮನಿ, ವಿಶ್ವನಾಥ ಕಾರ್ನಾಡ, ಹಣಮಂತ ಇಟಗಿ, ಅರವಿಂದ ಕಮಲಾಪೂರಕರ್ ರೇಣುಕಾ ಸರಡಗಿ, ವಿನೋದ ಕಾಂಬಳೆ, ಮಯೂರ ವಾಘಮೋರೆ, ಉಮರೇಶ ಶೃಂಗೇರಿ, ಸಿದ್ಧಾರ್ಥ ಪಾರೆ ಹಾಗೂ ಅಲ್ಲಮಪ್ರಭು ನಿಂಬರ್ಗಾ ಉಪಸ್ಥಿತರಿದ್ದರು.

ಒಂದನೇಯ ಪುಟದಿಂದ

ಏ 20ಕ್ಕೆ ಕರ್ನಾಟಕ ರಾಜ್ಯ ಛಲವಾದಿ ಮಹಾಸಭಾ ವತಿಯಿಂದ ಸಾಮೂಹಿಕ ವಿವಾಹದ ಕರಪತ್ರ ಬಿಡುಗಡೆ

ಒಕ್ಕೂಟದ ರಾಜ್ಯಾಧ್ಯಕ್ಷರಾದ ಜ್ಞಾನ ಪ್ರಕಾಶ

ಸ್ವಾಮೀಜಿಯವರು ಕರೆ ಕೊಟ್ಟಿದ್ದಾರೆ. ನಾಗಮೋಹನ್ ದಾಸ್ ಅವೈಜ್ಞಾನಿಕ ವರದಿ ಬಲಗೈ ಸಮುದಾಯಕ್ಕೆ ಶಾಪವಾಗಿದೆ ಫ್ರೀಡಂ ಪಾರ್ಕ್ ಬೆಂಗಳೂರಿನಲ್ಲಿ ಬಲಗೈ ಸಮುದಾಯ ಶಕ್ತಿ ಪ್ರದರ್ಶನ ಸರ್ಕಾರಕ್ಕೆ ತೋರಿಸಿಕೊಟ್ಟಿದ್ದೇವೆ. ಸರ್ಕಾರ ನಮಗೆ ನ್ಯಾಯ ಒದಗಿಸುವವರೆಗೂ ನಮ್ಮ ಹೋರಾಟ ನಿರಂತರವಾಗಿರುತ್ತದೆ. ಆದ್ದರಿಂದ ಜಿಲ್ಲೆಯ ಪ್ರತಿ ತಾಲೂಕಿನಿಂದ ಕನಿಷ್ಠ 20 ಜನರು ಆಗಮಿಸಿ ಈ ಒಂದು ಕಾರ್ಯಕ್ರಮದಲ್ಲಿ ಪಾಲ್ಗೊಂಡು ಯಶಸ್ವಿಗೊಳಿಸಬೇಕೆಂದರು.

ಇದೇ ಸಂದರ್ಭದಲ್ಲಿ ಜಿಲ್ಲಾ ಉಪಾಧ್ಯಕ್ಷ ಅಂಬಣ್ಣ ಮಲ್ಲಾಪುರ,ಜಿಲ್ಲಾ ಪ್ರಧಾನ ಕಾರ್ಯದರ್ಶಿ ಕೆ ಯಲ್ಲಪ್ಪ, ಡಿಡಿ ದುರುಗಪ್ಪ ಮಲ್ಲಾಪುರ, ಎಂ ಡಿ ದುರುಗಪ್ಪ, ತಾಲೂಕ ಅಧ್ಯಕ್ಷ ವೀರೇಶ್ ಹಂಚಿನಾಳ ಕೆ ,ತಾಲೂಕು ಉಪಾಧ್ಯಕ್ಷ ಕುಬೇರಪ್ಪ ಹೊಸಳ್ಳಿ ಕೆ,ಕಾರ್ಯಾಧ್ಯಕ್ಷ ಶಂಕ್ರಪ್ಪ ಜಾಲಿಹಾಳ, ಪ್ರಧಾನ ಕಾರ್ಯದರ್ಶಿ ಮಾರಪ್ಪ ರಾಮತ್ನಾಳ, ಕಾರ್ಯದರ್ಶಿ ಹನುಮಂತ ಮಲ್ಲಾಪುರ, ಸಹ ಕಾರ್ಯದರ್ಶಿ ಶ್ರೀಧರ ಬಾದರ್ಲಿ ಸೇರಿದಂತೆ ಉಪಸ್ಥಿತರಿದ್ದರು.

ಜಿಲ್ಲಾ ಚಲವಾದಿ ನೌಕರರ ಸಂಘ ಸ್ಥಾಪನೆ: ವಿವಿಧ ಇಲಾಖೆ ನೌಕರರಿಗೆ ಹೊಣೆಗಾರಿಕೆ ಹಂಚಿಕೆ

ಸಭೆಯಲ್ಲಿ ಸಮಾಜದ ಹಿರಿಯರು, ನಿವೃತ್ತ ನೌಕರರು, ವಿವಿಧ ಇಲಾಖೆಗಳ ನೌಕರರು ಹಾಗೂ ಕಾನೂನು ಸಲಹೆಗಾರರು ಉಪಸ್ಥಿತರಿದ್ದರು.

ನವ ಉದಾರೀಕರಣವೇ ಅಭಿವೃದ್ಧಿ ಎಂದು ಕೇಂದ್ರ ಸರಕಾರ ಅಸಮಾನತೆ ಪೋಷಿಸುತ್ತಿದೆ : ಶ್ರೀಪಾದ್ ಭಟ್

ಮಾಲಿ ಪಾಟೀಲ ಮಾತನಾಡಿ, ಕೃಷಿ ಕ್ಷೇತ್ರವನ್ನು ಸರ್ಕಾರಗಳು ಕಡೆಗಣಿಸುತ್ತಿರುವುದರಿಂದ ರೈತರು ಕೃಷಿಯಿಂದ ದೂರವಾಗುತ್ತಿದ್ದಾರೆ. ರೈತರ ಪರ ಕಾಯ್ದೆಗಳನ್ನು ಜಾರಿಗೆ ತಂದು ಕೃಷಿ ಕ್ಷೇತ್ರವನ್ನು ಉಳಿಸಬೇಕು ಎಂದು ಒತ್ತಾಯಿಸಿದರು.

ಕಲಬುರಗಿಯ ಸಂಸ್ಕೃತಿ ಚಿಂತಕ ಆರ್ ಕೆ ಹುಡಗಿ, ಜನ ಸಂಗ್ರಾಮ ಪರಿಷತ್ ಅಧ್ಯಕ್ಷ,ಹಿರಿಯ ಹೋರಾಟಗಾರ ರಾಘವೇಂದ್ರ ಕುಷ್ಟಗಿ,ಮಹರ್ಷಿ ವಾಲ್ಮೀಕಿ ವಿವಿಯ ಸಿಂಡಿಕೇಟ್ ಸದಸ್ಯ ಜೀಶಾನ್ ಅಖಿಲ್ ಸಿದ್ದೀಖಿ, ಸಮುದಾಯ ರಾಯಚೂರು ಸಂಸ್ಕೃತಿಕ ಸಂಘಟನೆಯ ಗೌರವಾಧ್ಯಕ್ಷ ಶರಣು ಮಾಲಿ ಪಾಟೀಲ್, ವಿ.ಎನ್ ಅಕ್ಕಿ, ಸಿಐಟಿಯು ಜಿಲ್ಲಾ ಅಧ್ಯಕ್ಷೆ ಹೆಚ್ ಪದ್ಮಾ, ಎಸ್ ಮಾರೆಪ್ಪ ವಕೀಲ ಮತ್ತಿತರರು ಇದ್ದರು

ಪಿರಮಿಡ್ ಧ್ಯಾನದ ಮಹತ್ವ ಪರಿಚಯ, ಪ್ರಾಣಪ್ರತಿಷ್ಠಾಪನೆ, ಸಾರ್ವಜನಿಕರಿಗೆ ಆಹ್ವಾನ

ಪಿರಮಿಡ್ ಹಲವು ದಶಕಗಳ ಹಿಂದೆಯೇ ನಿರ್ಮಾಣಗೊಂಡಿದ್ದು, ಅದರ ವೈಶಿಷ್ಟತೆ ಆರೋಗ್ಯ ಹಾಗೂ ಆಯಸ್ಸಿ ನ ದೃಷ್ಟಿಯಿಂದ ಮಹತ್ವದ್ದಾಗಿದೆ ಎಂದು ತಿಳಿಸಿದರು.

ಸುದ್ದಿಗೋಷ್ಠಿಯಲ್ಲಿ ಗಾಣಧಾಳ್ ಲಕ್ಷ್ಮೀಪತಿ, ಬಿ. ಗೋವಿಂದ್, ಕೆ. ಭೀಮಾಶಂಕರ್, ಮಾರಾಂ ಹೇಮಾ ನಾರಾಯಣ ಹಾಗೂ ಮುದಗಲ್ ಈರಣ್ಣ ಉಪಸ್ಥಿತರಿದ್ದರು.

ಇರಾನ್ ಮಾತುಕತೆಗೆ ಬರದಿದ್ದರೆ ನಮಗೆ ನಷ್ಟವಿಲ್ಲ ; ಟ್ರಂಪ್



ವಾಷಿಂಗ್ಟನ್, ಏ. 13-

ಇರಾನ್ ಮತ್ತು ಮಾತುಕತೆಗೆ ಬರುತ್ತದೆಯೋ ಅಥವಾ ಹಾಗೇ ಇರುತ್ತದೋ ಅನ್ನುವ ಬಗ್ಗೆ ನಮಗೆ ಯಾವುದೇ ಕಾಳಜಿ ಇಲ್ಲ ಎಂದು ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಗುಡುಗಿದ್ದಾರೆ.

ಪಾಕಿಸ್ತಾನದ ಆತಿಥ್ಯದಲ್ಲಿ ನಡೆದ ಅಮೆರಿಕ-ಇರಾನ್ ಶಾಂತಿ ಮಾತುಕತೆಗಳು ಯಾವುದೇ ಒಪ್ಪಂದವಿಲ್ಲದೆ ಮುಕ್ತಾಯಗೊಂಡ ಬೆನ್ನಲ್ಲೇ ಟ್ರಂಪ್ ಅವರು ಈ ಬೆದರಿಕೆ ಹಾಕಿದ್ದಾರೆ. ಫ್ಲೋರಿಡಾದಿಂದ ಹಿಂದಿರುಗಿದ ನಂತರ ಜಂಟಿ ಬೇಸ್ ಆಂಡ್ರ್ಯೂಸ್‌ನಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಅಮೆರಿಕದ ಹಿತಾಸಕ್ತಿಯೇ ತಮಗೆ ಮುಖ್ಯ ಎಂದು ಸ್ಪಷ್ಟಪಡಿಸಿದರು.

ಇರಾನ್ ಮಾತುಕತೆಯ ಮೇಜಿಗೆ ಮರಳುತ್ತದೆಯೋ ಇಲ್ಲವೋ ಎಂಬುದು ನನಗೆ ಮುಖ್ಯವಲ್ಲ. ಅವರು ಬರದಿದ್ದರೆ ನನಗೇನು ನಷ್ಟವಿಲ್ಲ, ಏನೇ ಆದರೂ ಅಂತಿಮವಾಗಿ ನಾವೇ ಗೆಲ್ಲುತ್ತೇವೆ ಎಂದು ಅವರು ಪ್ರತಿಪಾದಿಸಿದರು.

ಇಸ್ಲಾಮಾಬಾದ್‌ನಲ್ಲಿ ನಡೆದ 21 ಗಂಟೆಗಳ ಮಾತುಕತೆಯಲ್ಲಿ ಇರಾನ್ ಇನ್ನೂ ಪರಮಾಣು ಶಸ್ತ್ರಾಸ್ತ್ರಗಳ ತಯಾರಿಕೆಯಲ್ಲಿ ಆಸಕ್ತಿ ಹೊಂದಿದೆ ಎಂಬುದು ಸಾಬೀತಾಗಿದೆ. ಆದರೆ, ಇರಾನ್ ಯಾವುದೇ ಕಾರಣಕ್ಕೂ ಪರಮಾಣು ಅಸ್ತ್ರ ಹೊಂದಲು ಬಿಡುವುದಿಲ್ಲ ಎಂದು ಟ್ರಂಪ್ ಮತ್ತೊಮ್ಮೆ ಎಚ್ಚರಿಸಿದ್ದಾರೆ.

ಅಮೆರಿಕದ ಉಪಾಧ್ಯಕ್ಷ ಜೆಡಿ ವ್ಯಾನ್ಸ್ ನೇತೃತ್ವದ ನಿಯೋಗವು ಮೊಹಮ್ಮದ್ ಬಘೇರ್ ಗಾಲಿಬಾಫ್ ನೇತೃತ್ವದ ಇರಾನಿನ ತಂಡದೊಂದಿಗೆ ನಡೆಸಿದ ಸುದೀರ್ಘ ಚರ್ಚೆಯ ವಿವರಗಳು ಈಗ ಹೊರಬರುತ್ತಿವೆ. ಲೆಬನಾನ್‌ನಲ್ಲಿ ಹಿಜ್ಬುಲ್ಲಾ ಮೇಲೆ ಇಸ್ರೇಲ್ ನಡೆಸುತ್ತಿರುವ ದಾಳಿಗಳು ಮತ್ತು ಹಾರ್ಮುಜ್ ಜಲಸಂಧಿಯ ಬಿಕ್ಕಟ್ಟು ಈಗಾಗಲೇ ಕದನ ವಿರಾಮದ ಮೇಲೆ ಭಾರಿ ಒತ್ತಡ ಹೇರಿವೆ.

ಮಾತುಕತೆಗಳ ಕುಸಿತವು ಕೇವಲ ರಾಜತಾಂತ್ರಿಕ ವೈಫಲ್ಯವಲ್ಲ, ಇದು ಜಾಗತಿಕ ಆರ್ಥಿಕತೆಯ ಮೇಲೂ ಕರಾಳ ನೆರಳು ಬೀರಿದೆ. ಈ ಜಲಸಂಧಿಯನ್ನು ಮತ್ತೆ ತೆರೆಯುವ ಮೂಲಕ ತೈಲ ಬೆಲೆಗಳನ್ನು ಸ್ಥಿರಗೊಳಿಸಬಹುದು ಎಂಬ ಭರವಸೆ ಈಗ ಮಸುಕಾಗಿದೆ.

ಅಮೆರಿಕವು ಇರಾನ್ ವಿರುದ್ಧ ತನ್ನ ಮಿಲಿಟರಿ ಕಾರ್ಯಾಚರಣೆಯನ್ನು ಮತ್ತೆ ಯಾವಾಗ ಆರಂಭಿಸಬಹುದು ಎಂಬ ಅನಿಶ್ಚಿತತೆ ಈಗ ಇಡೀ ಜಗತ್ತನ್ನು ಆತಂಕಕ್ಕೆ ತಳ್ಳಿದೆ.

ಇನ್ನೊಂದೆಡೆ, ಇರಾನ್ ಅಧ್ಯಕ್ಷರು ತಮ್ಮ ದೇಶವು ಸಮತೋಲಿತ ಮತ್ತು ನ್ಯಾಯಯುತ ಒಪ್ಪಂದಕ್ಕೆ ಮಾತ್ರ ಸಿದ್ಧವಾಗಿದೆ ಎಂದು ಹೇಳುವ ಮೂಲಕ ಅಮೆರಿಕದ ಷರತ್ತುಗಳನ್ನು ತಳ್ಳಿಹಾಕಿದ್ದಾರೆ.

ಡೊನಾಲ್ಡ್ ಟ್ರಂಪ್ ಅವರ ಗೆದ್ದೇ ಗೆಲ್ಲುತ್ತೇವೆ ಎಂಬ ಆತ್ಮವಿಶ್ವಾಸ ಮತ್ತು ಇರಾನ್‌ನ ಪಟ್ಟು ಸಡ್ಯಕ್ಕೆ ಯಾವುದೇ ಶಾಂತಿಯ ಮುನ್ಸೂಚನೆ ಕೊಡುತ್ತಿಲ್ಲ, ಎರಡು ವಾರಗಳ ಈ ದುರ್ಬಲ ಕದನ ವಿರಾಮವು ಶೀಘ್ರದಲ್ಲೇ ದೊಡ್ಡ ಮಟ್ಟದ ಯುದ್ಧಕ್ಕೆ ದಾರಿ ಮಾಡಿಕೊಡುತ್ತದೆಯೇ ಎಂಬುದು ಈಗಿನ ದೊಡ್ಡ ಪ್ರಶ್ನೆಯಾಗಿದೆ.

ಕಾಂಗ್ರೆಸ್‌ನಲ್ಲಿ ನಿಷ್ಠೆಗೂ ಹುದ್ದೆ ಸಿಗಲಿಲ್ಲ; ಬಾಬು ಆಕ್ರೋಶ

ರಾಯಚೂರು,ಏ.13-

ಕಳೆದ 35 ವರ್ಷಗಳಿಂದ ಕಾಂಗ್ರೆಸ್ ಪಕ್ಷದಲ್ಲಿ ನಿಷ್ಠೆಯಿಂದ ಸೇವೆ ಸಲ್ಲಿಸುತ್ತಿದ್ದರೂ ಪಕ್ಷದಲ್ಲಾಗಲಿ ಅಥವಾ ಆಡಳಿತ ವ್ಯವಸ್ಥೆಯಲ್ಲಾಗಲಿ ಯಾವುದೇ ಹುದ್ದೆ ಅಥವಾ ಸದಸ್ಯತ್ವ ನೀಡಲಾಗಿಲ್ಲ ಎಂದು ನಗರದ ಹರಿಜನವಾಡ ನಿವಾಸಿ ಬಾಬು ಆಕ್ರೋಶ ವ್ಯಕ್ತಪಡಿಸಿದರು.

ನಗರದ ಪತ್ರಿಕಾ ಭವನದಲ್ಲಿ ನಡೆದ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಎಂ.ಎಸ್. ಪಾಟೀಲ್, ಎಂ. ಈರಣ್ಣ, ಯಾಸೀನ್, ಪಾಪರೆಡ್ಡಿ ಸೇರಿದಂತೆ ಹಲವು ಹಿರಿಯ ನಾಯಕರೊಂದಿಗೆ ದೀರ್ಘಕಾಲದಿಂದ ಕೆಲಸ ಮಾಡಿದ್ದೇನೆ. ಪ್ರಸ್ತುತ ಎನ್.ಎಸ್. ಬೋಸರಾಜ್, ರವಿ ಹಾಗೂ ಮಹ್ಮದ್ ಶಾಲಂ ಅವರೊಂದಿಗೆ ಕಾಂಗ್ರೆಸ್ ಪಕ್ಷದಲ್ಲಿ ಹಗಲು-ರಾತ್ರಿ ಸೇವೆ ಸಲ್ಲಿಸುತ್ತಿದ್ದೇನೆ. ನಿಷ್ಠೆಯಿಂದ ಕೆಲಸ ಮಾಡಿದ ಕಾರ್ಯಕರ್ತರಿಗೆ ಸೂಕ್ತ ಗೌರವ ಸಿಗಬೇಕು. ಆದರೆ ನನ್ನಂತಹ ಕಾರ್ಯಕರ್ತರಿಗೆ ಮಾನ್ಯತೆ ಸಿಗದಿರುವುದು ಬೇಸರ ತಂದಿದೆ ಎಂದು ಹೇಳಿದರು.

ಒಳ ಮೀಸಲಾತಿ ವಿಚಾರದಲ್ಲಿ ಕಳೆದ 35 ವರ್ಷಗಳಿಂದ ಹೋರಾಟ ನಡೆಸಿದರೂ ಸರ್ಕಾರದಿಂದ ಸ್ಪಷ್ಟ ಕ್ರಮ ಕೈಗೊಳ್ಳದಿರುವುದರ ಬಗ್ಗೆ ಅವರು ಅಸಮಾಧಾನ ವ್ಯಕ್ತಪಡಿಸಿದರು. ಬಾಗಲಕೋಟೆ ಹಾಗೂ ದಾವಣಗೆರೆ ಚುನಾವಣಾ ಸಂದರ್ಭದಲ್ಲಿ ನೀತಿ ಸಂಹಿತೆ ಜಾರಿಯಲ್ಲಿದ್ದರೂ ರಾಯಚೂರು ಗೃಹ ರಕ್ಷಕದಳದ ಜಿಲ್ಲಾ ಸಮಾದೇಷ್ಠರ ನೇಮಕಾತಿ ನಡೆದಿರುವುದನ್ನು ಪ್ರಶ್ನಿಸಿದ ಅವರು, ಚುನಾವಣಾ ನೀತಿ ಸಂಹಿತೆ ಇದ್ದಾಗ ಇಂತಹ ನೇಮಕಾತಿ ಹೇಗೆ ನಡೆಯಿತು ಎಂಬುದು ಅನುಮಾನ ಹುಟ್ಟಿಸಿದೆ ಎಂದು ಆಕ್ಷೇಪಿಸಿದರು. ಈ ಸಂದರ್ಭದಲ್ಲಿ ವೆಂಕಟೇಶ್ ಹಾಗೂ ರಘು ಉಪಸ್ಥಿತರಿದ್ದರು.

ಕರ್ನಾಟಕ ರಾಜ್ಯ ಪ್ರಾಥಮಿಕ ಶಾಲಾ ಶಿಕ್ಷಕರ ತಾಲೂಕು ಘಟಕ ಚುನಾವಣೆಗೆ 18 ಜನರ ನಾಮಪತ್ರ ಸಲ್ಲಿಕೆ



ಸುರಪುರ,ಏ.13-

ಯಾದಗಿರಿ ಜಿಲ್ಲೆಯ ಸುರಪುರ ತಾಲೂಕಿನ ಕರ್ನಾಟಕ ರಾಜ್ಯ ಪ್ರಾಥಮಿಕ ಶಾಲಾ ತಾಲೂಕು ಘಟಕ ಚುನಾವಣೆಗೆ ಇಂದು ನಾಮಪತ್ರ ಸಲ್ಲಿಸಲು ಕೊನೆಯ ದಿನಾಂಕ ವಾಗಿದ್ದು ಒಟ್ಟು 18 ಜನರು ತಮ್ಮ ನಾಮಪತ್ರವನ್ನು ಸಲ್ಲಿಸಿದರು ಇದರಲ್ಲಿ 05 ಜನ ಪುರುಷರ ಸ್ಥಾನಕ್ಕೆ 15 ಜನ ನಾಮಪತ್ರ ಸಲ್ಲಿಸಿದ್ದು 02 ಜನ ಮಹಿಳೆಯರ ಸ್ಥಾನಕ್ಕೆ 03 ಜನ ನಾಮಪತ್ರವನ್ನು ಸಲ್ಲಿಸಿದ್ದಾರೆ.

ನಾಮಪತ್ರ ಪರಿಶೀಲನ ದಿನಾಂಕ :13-04-20026, ನಾಮಪತ್ರ ಹಿಂಪಡೆಯುವ ದಿನಾಂಕ :14-04-20026 ವಾಗಿರುತ್ತದೆ ಎಂದು ಚುನಾವಣಾಧಿಕಾರಿಗಳಾದ ಶ್ರೀ ಭೀಮರಾಯ ಗೋನಾಳ್ ಸಹಾಯಕ ಚುನಾವಣೆ ಅಧಿಕಾರಿಗಳಾದ ಶ್ರೀ ಸಿದ್ದಣ್ಣ ಹೊಸಗೌಡರು ಪತ್ರಿಕಾ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಹೃದ್ರೋಗ ಚಿಕಿತ್ಸೆ ಸೌಲಭ್ಯ ಶ್ಲಾಘನೀಯ



ಬಾಗಲಕೋಟೆ,ಏ.13-

'ಜೀವನಶೈಲಿ ಬದಲಾವಣೆಯಿಂದ ಹೃದಯ ಸಂಬಂಧಿ ಕಾಯಿಲೆಗಳು ಹೆಚ್ಚಾಗಿವೆ. ಅಂತಹ ಹೃದ್ರೋಗಿಗಳಿಗೆ ಚಿಕಿತ್ಸೆ ಸೌಲಭ್ಯ ಒದಗಿಸಿರುವುದು ಶ್ಲಾಘನೀಯ' ಎಂದು ಸಂಸದ ಪಿ.ಸಿ. ಗದ್ದಿಗೌಡರ ಹೇಳಿದರು.

ನಗರದ ದಡ್ಡೇನವರ ಆಸ್ಪತ್ರೆ ಮತ್ತು ಸಂಶೋಧನಾ ಕೇಂದ್ರದಿಂದ ಆರಂಭಿಸಲಾದ ಸೂಪರ್ ಸ್ಪೆಷಾಲಿಟಿ ವಿಭಾಗ, ಬಾಗಲಕೋಟೆ ಹಾರ್ಟ್ ಕೇರ್ ಸೆಂಟರ್ ಉದ್ಘಾಟಿಸಿ ಮಾತನಾಡಿದ ಅವರು, ಕಡಿಮೆ ಶುಲ್ಕದಲ್ಲಿ ಅತ್ಯಾಧುನಿಕ ಸೌಲಭ್ಯ ಒದಗಿಸುವ ಮೂಲಕ ಡಾ.ದಡ್ಡೇನವರ ಅವರು ಇತಿಹಾಸ ಬರೆದಿದ್ದಾರೆ ಎಂದರು.

ದಶಕಗಳಿಂದ ವೈದ್ಯ ವೃತ್ತಿಯಲ್ಲಿರುವ ಅವರು, ರೋಗಿಗಳಿಗಾಗಿ ಸದಾ ಹೊಸ ಸೌಲಭ್ಯ ಒದಗಿಸುವ ಚಿಂತನೆಯಲ್ಲಿದ್ದಾರೆ. ಹೃದಯಾಘಾತವಾದ ಎರಡು ಗಂಟೆಯೊಳಗೆ ಚಿಕಿತ್ಸೆ ಒದಗಿಸಿದರೆ ಪ್ರಾಣಾಪಾಯ ತಪ್ಪುತ್ತದೆ. ಜೀವನಶೈಲಿ ಬದಲಾಯಿಸಿಕೊಳ್ಳಬೇಕು ಎಂದು ಹೇಳಿದರು.

ಬಿವಿವಿ ಸಂಘದ ಕಾರ್ಯಾಧ್ಯಕ್ಷ ವೀರಣ್ಣ ಚರಂತಿಮಠ ಮಾತನಾಡಿ, ನಗರದಲ್ಲಿ ದಶಕಗಳ ಹಿಂದೆ ಬೆರಳೆಣಿಕೆಯ ಆಸ್ಪತ್ರೆಗಳಿದ್ದವು. ಹೆಚ್ಚಿನ ಚಿಕಿತ್ಸೆ ಗೆ ಸೊಲ್ಲಾಪುರ, ಮೀರಜ್‌ಗೆ ಹೋಗಬೇಕಿತ್ತು. ಬಿವಿವಿ ಸಂಘದ ಮೆಡಿಕಲ್ ಕಾಲೇಜು, ಖಾಸಗಿ ಆಸ್ಪತ್ರೆಗಳಿಂದ ನಗರ ಈಗ ಮೆಡಿಕಲ್ ಹಬ್ ಆಗಿದೆ ಎಂದರು.

ಬೃಹತ್ ನಗರಗಳಲ್ಲಿ ದೊರೆಯುವ ಚಿಕಿತ್ಸೆ ಈಗ ಇಲ್ಲಿಯೇ ದೊರೆಯುತ್ತಿದೆ. ಬೇರೆ ಜಿಲ್ಲೆಗಳಿಂದಲೂ ಜನರು ಚಿಕಿತ್ಸೆ ಪಡೆಯಲು ಬರುತ್ತಾರೆ. ರೋಗಿಗಳಿಗೆ ಉತ್ತಮ ಚಿಕಿತ್ಸೆ ನೀಡಬೇಕು. ಆಶ್ರಯಕ್ಕೆ ಬಂದವರು ಆರೋಗ್ಯವಂತರಾಗಿ ಹೋಗಬೇಕು ಎಂದು ಸಲಹೆ ನೀಡಿದರು.

ಸಾನ್ನಿಧ್ಯ ವಹಿಸಿದ್ದ ಕೊಪ್ಪಳದ ಗವಿಸಿದ್ದೇಶ್ವರ ಮಠದ ಅಭಿನವ ಗವಿಸಿದ್ದೇಶ್ವರ ಸ್ವಾಮೀಜಿ ಮಾತನಾಡಿ, ಜನರ ಆರೋಗ್ಯ ಕಾಪಾಡಲು ಹೊಸ ವಿಭಾಗಗಳನ್ನು ಆರಂಭಿಸಿರುವುದು ಉತ್ತಮ ಬೆಳವಣಿಗೆ. ಜೀವನದಲ್ಲಿ ಸಂಪತ್ತಿಗಿಂತ ಆರೋಗ್ಯ, ಸಂತೋಷ ಮುಖ್ಯ. ಜೀವನವನ್ನು ಸಂಪತ್ತಿನಿಂದ ಅಳೆಯಬಾರದು. ಸಂತೋಷದಿಂದ ಇರುವ ಮನುಷ್ಯನಿಗೆ ಸಂಪತ್ತು ಬೇಕಿಲ್ಲ ಎಂದರು.

ರಾಜ್ಯಸಭೆ ಸದಸ್ಯ ನಾರಾಯಣ ಭಾಂಡಗೆ, ಮಾಜಿ ಶಾಸಕರಾದ ರಾಜಶೇಖರ ಶೀಲವಂತ, ಎಂ.ಕೆ. ಪಟ್ಟಣಶೆಟ್ಟಿ, ಡಾ. ಸುಮಂಗಲಾ ದಡ್ಡೇನವರ, ಡಾ.ವಿಜಯ್ ದಡ್ಡೇನವರ, ಡಾ.ನೇಹಾ ದಡ್ಡೇನವರ, ಹೃದ್ರೋಗ ತಜ್ಞ ಡಾ.ಸಂತೋಷ ಚಿಕ್ಕೋಡಿ, ಡಾ.ಶಶಿಧರ ಖಾನಾಪುರ, ಡಾ.ಆನಂದ ದಡ್ಡೇನವರ, ಡಾ.ಬಸವರಾಜ ದಡ್ಡೇನವರ ಇದ್ದರು.



ಕೆಲ್ಲೂರು ಉಚಿತ ಆರೋಗ್ಯ ತಪಾಸಣಾ ಶಿಬಿರ

ಜೇವರ್ಗಿ,ಏ.13-

ಪಟ್ಟಣದ ಸರ್ಕಾರಿ ಪ್ರಥಮ ದರ್ಜೆ ಕಾಲೇಜು ಸಮೀಪದ ಕೆಲ್ಲೂರು ಗ್ರಾಮದಲ್ಲಿ ಕಾಲೇಜಿನ ಐಕ್ಯೂಎಸಿ ಹಾಗೂ ಭಾರತೀಯ ರೆಡ್ ಕ್ರಾಸ್ ಸಂಸ್ಥೆ ಸಹಯೋಗದಲ್ಲಿ ಗ್ರಾಮಸ್ಥರಿಗಾಗಿ ಉಚಿತ ಆರೋಗ್ಯ ತಪಾಸಣಾ ಶಿಬಿರವನ್ನು ಏರ್ಪಡಿಸಲಾಯಿತು.

ಕಲಬುರಗಿ ಜಿಲ್ಲೆಯ ರೆಡ್ ಕ್ರಾಸ್ ಸಂಸ್ಥೆಯ ಸಭಾಪತಿಗಳಾದ ಅರುಣ್ ಕುಮಾರ್ ಲೋಯ ಕಾರ್ಯಕ್ರಮವನ್ನು ಉದ್ಘಾಟಿಸಿದರು. ಕಾಲೇಜಿನ ಪ್ರಾಂಶುಪಾಲರಾದ ಡಾ.ಶಾಂತಾ ಅಸ್ಟಿಗೆ ಅಧ್ಯಕ್ಷತೆ ವಹಿಸಿದ್ದರು.

ಈ ಸಂದರ್ಭದಲ್ಲಿ ಭಾರತೀಯ ರೆಡ್ ಕ್ರಾಸ್ ಸಂಸ್ಥೆಯ ಗೌರವ ಕಾರ್ಯದರ್ಶಿ ರವೀಂದ್ರ ಶಾಬಾದಿ, ಭಾರತೀಯ ರೆಡ್ ಕ್ರಾಸ್ ಸಂಸ್ಥೆಯ ರಕ್ತದಾನ ಸಮಿತಿಯ ಸಂಚಾಲಕ ಡಾ. ಸೈಯದ್ ಸನಾವುಲ್ಲಾ ಮಾತನಾಡಿದರು. ಗ್ರಾಮ ಪಂಚಾಯತ್ ಅಭಿವೃದ್ಧಿ ಅಧಿಕಾರಿ ತಿಪ್ಪಯ್ಯ ಪತ್ತಿ, ಹಾಗೂ ಮಾಜಿ ಗ್ರಾಮ ಪಂಚಾಯತ್ ಅಧ್ಯಕ್ಷರಾದ ಅಮರಣ್ಣಗೌಡ ಉಪಸ್ಥಿತರಿದ್ದರು. ಯುವರ್ ಎಡ್ ಕ್ರಾಸ್ ಸಂಚಾಲಕಿ ಡಾ. ಖುತೇಜಾ ನಸ್ರಿನ್ ಸ್ವಾಗತಿಸಿದರು. ಸಿಬ್ಬಂದಿ ಕಾರ್ಯದರ್ಶಿ ಡಾ. ಖಾಜಾವಲಿ ಈಚನಾಳ ಪ್ರಾಸ್ತಾವಿಕ ಮಾತನಾಡಿದರು.

ಎನ್.ಎಸ್.ಎಸ್ ಕಾರ್ಯಕ್ರಮ ಅಧಿಕಾರಿ ಡಾ ಶರಣಪ್ಪ ಗುಂಡಗುರ್ತಿ, ಕುಪೇಂದ್ರ ರಾಥೋಡ್, ಹಾಗೂ ಅಪರ್ಣ ಇನ್ನಿತರ ಅಧ್ಯಾಪಕರು ಅತಿಥಿ ಉಪನ್ಯಾಸಕರು, ವಿದ್ಯಾರ್ಥಿಗಳು ಉಪಸ್ಥಿತರಿದ್ದರು. ಈ ಆರೋಗ್ಯ ತಪಾಸಣಾ ಶಿಬಿರದಲ್ಲಿ ಕಲ್ಬುರ್ಗಿಯ ಅಲ್ ಬದರ್ ಆಸ್ಪತ್ರೆ, ಯುನೈಟೆಡ್ ಆಸ್ಪತ್ರೆ ಮತ್ತು ಜೇವರ್ಗಿಯ ಸಾರ್ವಜನಿಕ ಆಸ್ಪತ್ರೆಯ ವೈದ್ಯರುಗಳು ಬಿಪಿ, ಮಧುಮೇಹ,ಕಣ್ಣು ಕಿವಿ,ಮೂಗು, ಗಂಟಲು, ತಜ್ಞರು ಹಾಗೂ ಮೂಳೆ, ಮಕ್ಕಳ ತಜ್ಞರು ವಿವಿಧ ರೀತಿಯಲ್ಲಿ ತಪಾಸಣೆ ನಡೆಸಿ, ಸೂಕ್ತ ಸಲಹೆ ನೀಡಿ ಮಾತ್ರೆಗಳನ್ನು ವಿತರಿಸಿದರು. 180ಕ್ಕೂಅಧಿಕ ಜನರು ಉಚಿತ ಆರೋಗ್ಯ ತಪಾಸಣಾ ಶಿಬಿರದ ಪ್ರಯೋಜನ ಪಡೆದುಕೊಂಡರು.

ಪ್ರೊ.ಭೀಮಣ್ಣ ನಿರೂಪಿಸಿದರೆ, ಡಾ.ಎನ್.ಜಿ.ಶ್ರೀಧರ್ ವಂದಿಸಿದರು.



ಬಿಸಿಲಿನ ಝಳಕ್ಕೆ ತಲ್ಲಣಿಸಿದ ಜನತೆ

ಬಾಗಲಕೋಟೆ,ಏ.13- ಜಿಲ್ಲೆಯಲ್ಲಿ ಭಾನುವಾರ ಕೆಲವು ಪ್ರದೇಶಗಲ್ಲಿ ತಾಪಮಾನ 40 ಡಿಗ್ರಿ ಸೆಲ್ಸಿ ಯಸ್ ದಾಟಿದೆ. ಇಡೀ ದಿನ ಎಲ್ಲಿಯೇ ಕುಳಿತರೂ ಬಿಸಿಯ ಅನುಭವವಾಗುತ್ತಿದೆ.

ಮನೆಯಲ್ಲಿ ಕುಳಿತರು, ಹೊರಗಡೆ ಹೋದರೂ ಸಮಾಧಾನವಿಲ್ಲದಂತಾಗಿದೆ. ಕ್ಷಣಕಾಲ ಫ್ಯಾನ್, ಎಸಿ (ಹವಾನಿ ಯಂತ್ರಿತ) ಇಲ್ಲದಿದ್ದರೆ, ಚಡಪಡಿಕೆ ಆರಂಭವಾಗುತ್ತದೆ. ವಿದ್ಯುತ್ ಸರಬರಾಜು ಕಡಿತಗೊಂಡರಂತೂ ಮನೆ ಯಲ್ಲಿ ಕುಳಿತುಕೊಳ್ಳಲು ಆಗುವುದೇ ಇಲ್ಲ.

ಇಲ್ಲಿಯವರೆಗೆ 37 ಡಿಗ್ರಿ ಸೆಲ್ಸಿ ಯಸ್ ಆಸುಪಾಸಿನಲ್ಲಿದ್ದ ಉಷ್ಣಾಂಶ ಈಗ ದಿನದಿಂದ ದಿನಕ್ಕೆ ಹೆಚ್ಚಾಗುತ್ತಿದೆ. ಮಾರ್ಚ್ ಅಂತ್ಯದಲ್ಲಿ ಒಂದೆರಡು ಸಲ ಸುರಿದ ಮಳೆಯಿಂದಾಗಿ ಅಷ್ಟೊಂದು ಬಿಸಿಲಿನ ಅನುಭವವಾಗಿರಲಿಲ್ಲ. ಆದರೆ, ವಾರದಿಂದ ಬಿಸಿಲಿನ ಝಳ ಹೆಚ್ಚಾಗುತ್ತಲೇ ಸಾಗಿದೆ. ಬಿಸಿಲಿನ ತಾಪ ದಿನದಿಂದ ದಿನಕ್ಕೆ ಹೆಚ್ಚುತ್ತಿದ್ದರೆ ಕೊಳವೆ ಬಾವಿಗಳಲ್ಲಿನ ನೀರಿನ ಪ್ರಮಾಣ ಕಡಿಮೆಯಾಗುತ್ತಿದೆ. ಕೆಲವು ಕಡೆಗಳಲ್ಲಿ ಕೊಳವೆ ಬಾವಿಗಳಲ್ಲಿನ ನೀರು ಬತ್ತಿ ಹೋಗಿದ್ದು, ನೀರೇ ಬರುತ್ತಿಲ್ಲ. ಹೊಸ ಕೊಳವೆಬಾವಿಗಳನ್ನು ಕೊರೆದರೂ ನೀರು ದಕ್ಕುತ್ತಿಲ್ಲ. 300 ರಿಂದ 400 ಅಡಿ ಆಳ ಕೊರೆದರೂ ನೀರು ಬರುತ್ತಿಲ್ಲ.

ಜಿಲ್ಲೆಯಲ್ಲಿ ಮೂರು ನದಿಗಳು ಹರಿಯುತ್ತಿದ್ದು, ಮೂರು ನದಿಗಳಲ್ಲಿ ನೀರಿನ ಪ್ರಮಾಣ ಕಡಿಮೆ ಇದೆ. ಘಟಪ್ರಭಾಕ್ಕೆ ನೀರು ಹರಿಸಲಾಗಿದೆ.

ತಂಪು ಪಾನೀಯ ಮೊರೆ ಹೋದ ಜನತೆ: ಬಿಸಿಲಿನ ತಾಪ ಹೆಚ್ಚಳದಿಂದ ಪಾರಾಗಲು ಜನರು ತಂಪು ಪಾನೀಯದ ಮೊರೆ ಹೋಗುತ್ತಿದ್ದಾರೆ. ಬೇಸಿಗೆಯಲ್ಲಿ ಮಾತ್ರ ತೆರೆಯುವ ಲಸ್ಸಿ ಕೇಂದ್ರಗಳು ಅಲ್ಲಲ್ಲಿ ತಲೆ ಎತ್ತಿವೆ. ಮಜ್ಜಿಗೆ ಎಳನೀರು, ಜ್ಯೂಸ್, ಐಸ್‌ಕ್ರೀಂ, ಕಬ್ಬಿನ ಹಾಲು ಸೇವಿಸುವ ಮೂಲಕ ದಾಹ ತಣಿಸಿಕೊಳ್ಳುವ ಪ್ರಯತ್ನ ಮಾಡುತ್ತಿದ್ದಾರೆ. ತಂಪು ಪಾನೀಯ ಅಂಗಡಿಗಳ ಮುಂದೆ ಮಧ್ಯಾಹ್ನದ ವೇಳೆ ಜನರು ಗುಂಪು, ಗುಂಪಾಗಿ ಸೇರುತ್ತಿದ್ದಾರೆ. ಅವಲಕ್ಕಿ ಮೊಸರು ಸೇವಿಸುತ್ತಿದ್ದಾರೆ.

ಬೆಳಿಗ್ಗೆಯಿಂದ ಸೆಕೆ ವಿಪರೀತ ಹೆಚ್ಚಾಗಿದೆ. ಏನೇ ಮಾಡಿದರೂ ಸಮಾಧಾನವಾಗುತ್ತಿಲ್ಲ. ಬೆವರು ಇಳಿಯುತ್ತದೆ. ಫ್ಯಾನ್ ಕೆಳಗಡೆಯೇ ಕುಳಿತುಕೊಳ್ಳುವಂತಾಗಿದೆ ಎಂದರು ನವನಗರ ನಿವಾಸಿ ನಾಗರಾಜ ಪಾಟೀಲ.

ಸಮರ್ಪಕ ಮಾಹಿತಿ ಕಲೆಹಾಕಿ



ಕೊಲ್ಹಾರ, ಏ.13-

2027ರಲ್ಲಿ ನಡೆಯುವ ಭಾರತದ ಜನಗಣತಿಗೆ ಅಗತ್ಯ ಮಾಹಿತಿಯನ್ನು ಮೊಬೈಲ್ ಫೋನ್ ಮೂಲಕ ಸರಳವಾಗಿ ನೀಡಬಹುದು. ಪ್ರಸಕ್ತ ವರ್ಷದ ಮೊದಲನೇ ಹಂತದ ಮನೆ ಪಟ್ಟಿ ಹಾಗೂ ಗಣತಿಯನ್ನು ಯಶಸ್ವಿಗೊಳಿಸಬೇಕು ಎಂದು ತಹಶೀಲ್ದಾರ ಸಂತೋಷ ಮ್ಯಾಗೇರಿ ಹೇಳಿದರು.

ಪಟ್ಟಣದ ಸರ್ಕಾರಿ ಪಾಲಿಟೆಕ್ನಿಕ್‌ನಲ್ಲಿ ತಾಲ್ಲೂಕು ಆಡಳಿತ ಹಾಗೂ ಪಟ್ಟಣ ಪಂಚಾಯಿತಿ ಸಹಯೋಗದಲ್ಲಿ ಗಣತಿದಾರರು ಹಾಗೂ ಗಣತಿ ಮೇಲ್ವಿಚಾರಕರಿಗಾಗಿ ಹಮ್ಮಿಕೊಂಡಿದ್ದ ಮೂರು ದಿನಗಳ ತರಬೇತಿ ಕಾರ್ಯಾಗಾರ ಉದ್ಘಾಟಿಸಿ ಮಾತನಾಡಿದರು.

2021ರಲ್ಲಿ ನಡೆಯಬೇಕಿದ್ದ ರಾಷ್ಟ್ರೀಯ ಜನಗಣತಿಯು, ಕೋವಿಡ್ ಕಾರಣದಿಂದ ತಡವಾಗಿದೆ. ಏಪ್ರಿಲ್ 16ರಿಂದ ಮೇ 15ರವರೆಗೆ ನಡೆಯುವ ಮನೆ ಗಣತಿಯನ್ನು ಎಲ್ಲರೂ ಹುರುಪಿನಿಂದ ಮಾಡಬೇಕು. ಮನೆ ಪಟ್ಟಿ ಹಾಗೂ ಜಾಗದ ನಕ್ಷೆ ಸಿದ್ಧಪಡಿಸಿಕೊಳ್ಳಬೇಕು. ಗಣತಿ ಸಂದರ್ಭದಲ್ಲಿ ಏನಾದರೂ ಸಮಸ್ಯೆಯಾದರೆ ಗಣತಿ ಮೇಲ್ವಿಚಾರಕರು ಹಾಗೂ ಅಧಿಕಾರಿಗಳ ಗಮನಕ್ಕೆ ತಂದು ಪರಿಹಾರ ಕಂಡುಕೊಳ್ಳಬೇಕು ಎಂದು ಸಲಹೆ ನೀಡಿದರು. ಪಟ್ಟಣ ಪಂಚಾಯಿತಿ ಮುಖ್ಯಾಧಿಕಾರಿ ವೀರೇಶ ಹಟ್ಟಿ ಮಾತನಾಡಿ, ರಾಷ್ಟ್ರೀಯ ಜನಗಣತಿ ಆಧರಿಸಿ, ದೇಶದಲ್ಲಿ ಯೋಜನೆಗಳು, ಸೌಲಭ್ಯಗಳು ಹಾಗೂ ಜನಸಂಖ್ಯೆ ಆಧರಿಸಿ ವಿಧಾನಸಭೆ, ಲೋಕಸಭಾ ಕ್ಷೇತ್ರಗಳು ಮರುವಿಂಗಡಣೆ ಆಗಲಿವೆ. ಹಾಗಾಗಿ, ಎಲ್ಲ ಗಣತಿದಾರರು ಮನೆ ಮನೆಗೆ ತೆರಳಿ ನಿಖರವಾಗಿ ಮನೆ ಪಟ್ಟಿ ಮಾಡಬೇಕು. ಸರಿಯಾದ ಮಾಹಿತಿ ಒದಗಿಸಬೇಕು ಎಂದರು.

ಸರ್ಕಾರಿ ಪಾಲಿಟೆಕ್ನಿಕ್ ಪ್ರಾಚಾರ್ಯ ಎಂ.ಬಿ. ಗರಸಂಗಿ, ತರಬೇತುದಾರ ಸಂಗಮೇಶ ಕಮತಗಿ, ದಾನೇಶ ಕಂಠಿ ಅವರು ಗಣತಿಯ ತರಬೇತಿ ನೀಡಿದರು. ಕೊಲ್ಹಾರ ಪಟ್ಟಣ ಹಾಗೂ ಸುತ್ತಲಿನ ಗ್ರಾಮಗಳ ಗಣತಿದಾರು ಹಾಗೂ ಗಣತಿ ಮೇಲ್ವಿಚಾರಕರು ಪಾಲ್ಗೊಂಡಿದ್ದರು.



ಬೆಂಕಿಯ ಮಳೆ ಕೃತಿಯಲ್ಲಿ ದಮನಿತರ ಕೂಗು: ಚಿಂತಕ ಆರಿಫ್ ರಾಜಾ

ಹಂಪಿ,ಏ.13-

ಹಂಪಿ ಕನ್ನಡ ವಿಶ್ವವಿದ್ಯಾಲಯದಲ್ಲಿ ಭಾನುವಾರ ಕನ್ನಡ ಸಾಹಿತ್ಯ ಅಧ್ಯಯನ ವಿಭಾಗದ ವತಿಯಿಂದ ನಡೆದ ನಮ್ಮ ಮಾತು 37 ಕಾರ್ಯಕ್ರಮದ ಅಂಗವಾಗಿ ಬೆಂಕಿಯ ಮಳೆ ಸಮಗ್ರ ಹೋರಾಟದ ಹಾಡುಗಳು ಕೃತಿಯ ಕುರಿತು ಸಂವಾದದಲ್ಲಿ ಅವರು ಮಾತನಾಡಿದರು.


ಕವಿಗಿಂತ ಹಾಡುಗಾರ ಹೆಚ್ಚು ಪ್ರಾಮುಖ್ಯನಾಗುತ್ತಾನೆ ಕಾರಣ, ಕೃತಿಯ ಸಂದೇಶವನ್ನು ಜನತೆಗೆ ತಲುಪಿಸುವ ಜವಾಬ್ದಾರಿ ಹಾಡುಗಾರನ ಮೇಲಿರುತ್ತದೆ ಎಂದರು.

ಕೃತಿಯ ಸಂಪಾದಕ ಹಾಗೂ ಕನ್ನಡ ವಿಶ್ವವಿದ್ಯಾಲಯ ಕುಪ್ಪಳ್ಳಿ ಕೇಂದ್ರದ ಹಿರಿಯ ಪ್ರಾಧ್ಯಾಪಕ ಪ್ರೊ.ಬಿ.ಎಂ. ಪುಟ್ಟಯ್ಯ ಮಾತನಾಡಿ, ಬೆಂಕಿಯ ಮಳೆ ಎಂಬ ಶೀರ್ಷಿಕೆಯನ್ನು ಸಿದ್ದಲಿಂಗಯ್ಯ ಅವರ ಕಾವ್ಯದಿಂದ ಪಡೆದಿರುವುದಾಗಿ ತಿಳಿಸಿದರು. ಬೆಂಕಿಯು ನಾಶವನ್ನು ಸೂಚಿಸಿದರೆ ಮಳೆಯು ಸೃಷ್ಟಿಯನ್ನು ಸೂಚಿಸುತ್ತದೆ. ಈ ಎರಡರ ಸಂಯೋಜನೆಯ ಮೂಲಕ ಶೀರ್ಷಿಕೆ ಹೋರಾಟದ ಸ್ವಭಾವವನ್ನು ವ್ಯಕ್ತಪಡಿಸುತ್ತದೆ ಎಂದರು.

ಇತ್ತೀಚಿನ ದಿನಗಳಲ್ಲಿ ಹೋರಾಟದ ಗೀತೆಗಳು ಸುಗಮ ಸಂಗೀತದ ರೂಪ ಪಡೆದುಕೊಳ್ಳುತ್ತಿರುವುದು ವಿಷಾದನೀಯ ಸಂಗತಿ ಎಂದ ಅವರು, ಈ ಹಾಡುಗಳು ಕೇರಿಯಿಂದ ನಾಡಿನವ 'ರೆಗೆ, ಅಲ್ಲಿಂದ ರಾಷ್ಟ್ರಮಟ್ಟದವರೆಗೆ ವ್ಯಾಪಿಸಬೇಕಾಗಿದೆ ಎಂದರು.

ಅಧ್ಯಕ್ಷತೆಯನ್ನು ಕನ್ನಡ ಸಾಹಿತ್ಯ ಅಧ್ಯಯನ ವಿಭಾಗದ ಮುಖ್ಯಸ್ಥ ಪ್ರೊ.ವೆಂಕಟಗಿರಿ ದಳವಾಯಿ ವಹಿಸಿದ್ದರು. ಎಲ್ಲಿಯವರೆಗೆ ಸಮಾಜದಲ್ಲಿ ಅಸಮಾನತೆ ಇರುತ್ತದೋ ಅಲ್ಲಿಯವರೆಗೂ ಹೋರಾಟದ ಹಾಡುಗಳು ಮತ್ತೆ ಮತ್ತೆ ಅಸ್ತಿತ್ವ ಪಡೆಯುತ್ತಲೇ ಇರುತ್ತವೆ ಎಂದರು. ಸಂಶೋಧನಾರ್ಥಿ ಪ್ರವೀಣ ಕಿತ್ತೂರ ಪ್ರಾಸ್ತಾವಿಕವಾಗಿ ಮಾತನಾಡಿದರು. ರವೀಂದ್ರ ನಾಯಕ್, ಕಮಲಮ್ಮ ಇದ್ದರು.

ಒತ್ತಡದ ಬದುಕಿಗೆ ಧ್ಯಾನ ಅಗತ್ಯ: ಟಿ.ಹರಿಶಂಕರ್



ಕಾರಟಗಿ,ಏ.13-

ನೆಮ್ಮದಿಯ ಜೀವನ ನಡೆಸಲು ದಿನದ ಕೆಲ ಸಮಯ ಧ್ಯಾನಕ್ಕೆ ಮೀಸಲಿಡಬೇಕು. ಧ್ಯಾನದಿಂದ ಸದಾ ಸಂತೋಷ, ಆನಂದ, ನೆಮ್ಮದಿಯಿಂದ ಇರಲು ಸಾಧ್ಯ' ಎಂದು ಕರ್ನಾಟಕ ಧ್ಯಾನ ಪ್ರಗತಿ ಪರಿಷತ್‌ನ ಅಧ್ಯಕ್ಷ ಹೊಸಪೇಟೆಯ ಟಿ.ಹರಿಶಂಕರ್ ಹೇಳಿದರು.

ಸಮೀಪದ ದೇವಿಕ್ಯಾಂಪ್‌ನ ಶ್ರೀದೇವಿ ಬೀರೇಶ್ವರ ಶ್ರೀಚಕ್ರ ಪಿರಮಿಡ್ ಧ್ಯಾನ ಮಂದಿರದ ಪ್ರಥಮ ವಾರ್ಷಿಕೋತ್ಸವದ ನಿಮಿತ್ತ ಶನಿವಾರ ನಡೆದ ಕಾರ್ಯಕ್ರಮದಲ್ಲಿ ಮಾತನಾಡಿದರು.

ನಮ್ಮ ಜೀವನ ನಾವಂದುಕೊಂಡಂತೆ ನಡೆಯಲು ಧ್ಯಾನ ಅಗತ್ಯ ಎಂದರು.

ಉದ್ಯಮಿ ವಿಶ್ವನಾಥ ಜವಳಿ ಮಾತನಾಡಿ, ಧ್ಯಾನ, ಸತ್ಸಂಗ, ಸೇವೆ ಇವುಗಳಿಂದ ಮನುಷ್ಯ ಪರಿಪಕ್ವನಾಗಬಲ್ಲ. ಧ್ಯಾನ ಮಾಡುವುದು ಎಷ್ಟು ಮುಖ್ಯವೋ ಅದರ ಅನುಷ್ಠಾನ ಅಷ್ಟೇ ಮುಖ್ಯ ಎಂದರು.

ಹೊಸಪೇಟೆಯ ಕೇಶವ್‌ರಾಜ್, ವಸಿಷ್ಟಮುನಿ ಅವರ ಕೊಳಲು ವಾದನ ಹಾಗೂ ಮೀರಾಕೇಶವ್‌ರಾಜ್‌ರ ಗಾಯನ ನೆರೆದವರ ಮನಸೂರೆಗೊಳಿಸಿತು. ಪುರಸಭೆ ಸದಸ್ಯೆ ಜಿ.ಅರುಣಾದೇವಿ, ಪ್ರಭುಸ್ವಾಮಿ ಇಲಕಲ್, ಹನುಮೇಶ ಶ್ರೇಷ್ಠಿ ಸಿರುಗುಪ್ಪ, ಸಿ.ಎಚ್. ಸುಬ್ಬಾರಾವ್, ಬಸವರಾಜ್ ಮರಿಯಮ್ಮನಹಳ್ಳಿ, ಹಂಪಣ್ಣ ಬಳ್ಳಾರಿ, ರಾಮಕೃಷ್ಣ ಕಂಪ್ಲಿ ಉಪಸ್ಥಿತರಿದ್ದರು.

ಶ್ರೀಧರಗೌಡ ಗೋನಾಳ, ಗಂಗಾವತಿಯ ಲಲಿತಾ ವಗ್ಗಾ, ಲಲಿತಾ ಕಂದಗಲ್ ಕಾರ್ಯಕ್ರಮ ನಿರ್ವಹಿಸಿದರು.

ನಿಮ್ಮೂರು ಸುದ್ದಿ

ಸಂಪಾದಕೀಯ

ಬಿಸಿ ಗಾಳಿ- ಪ್ರಕೃತಿಯ ಮುನಿಸಲ್ಲ, ಮಾನವನಿರ್ಮಿತ ಸಮಸ್ಯೆಗಳ ಪ್ರತಿಫಲ



ತಾಪಮಾನ ಹೆಚ್ಚಳ ಮತ್ತು ಬಿಸಿ ಗಾಳಿ ಪ್ರಕೃತಿಯ ಕೋಪವಲ್ಲ, ನಮ್ಮ ನಿರ್ಲಕ್ಷ್ಯದ ಪ್ರತಿಫಲ. ಇದು ಎಚ್ಚರಿಕೆಯ ಗಂಟೆ. ಇದನ್ನು ಅರಿತು ನಮಗಲ್ಲ, ನಮ್ಮ ಮಕ್ಕಳ ನೆಮ್ಮದಿಯ ಬದುಕಿಗಾಗಿ ಜಾಗೃತರಾಗಬೇಕಿದೆ. ಇಲ್ಲದಿದ್ದರೆ, ಇಂದಿನ ಬಿಸಿ ಗಾಳಿಯೇ ನಾಳೆಯ ಮಹಾಪ್ರಳಯವಾದರೂ ಆಶ್ಚರ್ಯವಿಲ್ಲ.

ಕಡು ಬೇಸಿಗೆಯ ಬಿಸಿಲ ದಗೆಯಿಂದ ಬೇಯುತ್ತಿರುವಾಗಲೇ, ಮುಂದಿನ ಮೂರು ದಿನಗಳಲ್ಲಿ ತೀವ್ರ ಸ್ವರೂಪದ ಬಿಸಿ ಗಾಳಿಗೆ ಕರ್ನಾಟಕ ಮೈಚಾಚಲಿದೆ. ಅಧಿಕ ಉಷ್ಣಾಂಶ ದಾಖಲಾಗುವ, ಸಾರ್ವಜನಿಕರ ಆರೋಗ್ಯದ ಮೇಲೆ ದುಷ್ಪರಿಣಾಮ ಬೀರುವ, ಜನ ಅಪಾಯಕ್ಕೆ ಸಿಲುಕುವ ಸಾಧ್ಯತೆ ಇದೆ ಎಂದು ಭಾರತೀಯ ಹವಾಮಾನ ಇಲಾಖೆ(ಐಎಂಡಿ) ಎಚ್ಚರಿಕೆ ನೀಡಿದೆ.

ಇಂದು ಬಿಸಿ ಗಾಳಿ ಎಂಬ ಪದ ಕೇವಲ ಹವಾಮಾನ ವರದಿಗಳಿಗಷ್ಟೇ ಸೀಮಿತವಾಗಿಲ್ಲ. ಪ್ರತಿಯೊಬ್ಬರ ಬದುಕಿನ ಭಾಗವೇ ಆಗಿದೆ, ಭಾರೀ ಪರಿಣಾಮ ಬೀರುತ್ತಿದೆ. ನಿಲ್ಲಲಾಗದ, ಕೂರಲಾಗದ, ತಾಳಲಾರದ ತಳಮಳವನ್ನು ಸೃಷ್ಟಿಸುತ್ತಿದೆ. ಜನರ ಜೀವನವನ್ನು ಹೈರಾಣು ಮಾಡುತ್ತಿದೆ. ಅದರಲ್ಲೂ ವಯಸ್ಕರು, ಮಕ್ಕಳು ಮತ್ತು ಹೃದಯಸಂಬಂಧಿ ರೋಗಿಗಳನ್ನು ಬಾಧಿಸುತ್ತಿದೆ. ಈ ಬೇಸಿಗೆ ಹಿಂದಿನಂತಿಲ್ಲ ಎಂಬುದನ್ನು ಮತ್ತೆ ಮತ್ತೆ ಮನದಟ್ಟು ಮಾಡಿಸುತ್ತಿದೆ.

ಬಿಸಿ ಗಾಳಿಗೆ ಜಾಗತಿಕ ತಾಪಮಾನ ಏರಿಕೆಯೇ ಪ್ರಮುಖ ಕಾರಣ ಎನ್ನುವುದು ತಜ್ಞರ ಅಭಿಮತವಾಗಿದೆ. ಪೆಸಿಫಿಕ್ ಸಾಗರದಲ್ಲಿ ಉಂಟಾಗುವ ಎಲ್ ನಿನೋ(ಮಹಾಸಾಗರದ ಮೇಲೆ ಗಾಳಿ ಮತ್ತು ಸಮುದ್ರ ಮೇಲ್ಮೈ ತಾಪಮಾನದಲ್ಲಿನ ವ್ಯತ್ಯಾಸದಿಂದ ಹೊರಹೊಮ್ಮುವ ಉಷ್ಣವಲಯ) ಪ್ರಕ್ರಿಯೆಯಿಂದ ವಾತಾವರಣ ಬದಲಾಗಿ ಬಿಸಿ ಗಾಳಿ ಹೆಚ್ಚಾಗುತ್ತದೆ. ಹಸಿರುಮನೆ ಅನಿಲ (ಕಾರ್ಬನ್ ಡೈಆಕ್ಸೈಡ್, ಮೀಥೇನ್) ಹೊರಸೂಸುವಿಕೆ ಹೆಚ್ಚಳದಿಂದ ಭೂಮಿಯ ಉಷ್ಣತೆ ಹೆಚ್ಚುತ್ತದೆ. ಇದರಿಂದ ಉಷ್ಣ ಅಲೆಗಳು ಅಥವಾ ಬಿಸಿ ಗಾಳಿ ಬೀಸತೊಡಗುತ್ತದೆ. ಬಿಸಿ ಗಾಳಿ ಎಂದರೆ ಒಂದು ಪ್ರದೇಶದಲ್ಲಿ ಸಾಮಾನ್ಯ ಉಷ್ಣಾಂಶಕ್ಕಿಂತ ಹೆಚ್ಚು ಬಿಸಿಯಾದ ಗಾಳಿ ಬೀಸುವುದು. ಉದಾಹರಣೆಗೆ, ಬಯಲು ಪ್ರದೇಶಗಳಲ್ಲಿ ಗರಿಷ್ಠ ತಾಪಮಾನ 40 ಡಿಗ್ರಿ ಸೆಲ್ಸಿಯಸ್‌ಗಿಂತ ಹೆಚ್ಚಾದರೆ, ಅದನ್ನು ಬಿಸಿ ಗಾಳಿ ಅಥವಾ ಹೀಟ್ ವೇವ್ಸ್ ಎಂದು ಪರಿಗಣಿಸಲಾಗುತ್ತದೆ.

ಭೂಮಿ ತನ್ನ ಸಹಜ ಸಮತೋಲನವನ್ನು ಕಳೆದುಕೊಳ್ಳುತ್ತಿದೆ ಎಂಬುದಕ್ಕೆ ತಾಪಮಾನ ಹೆಚ್ಚಳ ಮತ್ತು ಬಿಸಿ ಗಾಳಿಯ ಅಬ್ಬರ ಸ್ಪಷ್ಟ ಸೂಚನೆಗಳಾಗಿವೆ. ಇದು ಕೇವಲ ಹವಾಮಾನ ವೈಪರೀತ್ಯವಲ್ಲ, ಮಾನವ ನಿರ್ಮಿತ ಸಮಸ್ಯೆಗಳ ಪ್ರತಿಫಲ.

ಹಿಂದಿನ ಕಾಲದಲ್ಲಿ ಬೇಸಿಗೆ ಎಂದರೆ ಸಹಜ ಉಷ್ಣತೆ, ಅದು ಕೂಡ ಬದುಕಿನ ಒಂದು ಭಾಗವಾಗಿತ್ತು. ಆದರೆ ಈಗ ಅದು ಸಹಿಸಲಾರದ ಮಟ್ಟಕ್ಕೆ ಏರಿದೆ. ಅದಕ್ಕಿಂತ ಹೆಚ್ಚಾಗಿ ನಮ್ಮ ಮನಸ್ಥಿತಿ ಸಹಿಸಲಾರದ ಮಟ್ಟ ಮುಟ್ಟಿದೆ. ಕಂಡ ಕಂಫರ್ಟಬಲ್ ಸರಕೆಲ್ಲ ಬೇಕೆನಿಸಿದೆ. ಸರಳ ಬದುಕು ಸೈಡಿಗೆ ಸರಿದಿದೆ.

ಆಧುನಿಕ ಬದುಕನ್ನು ಅಪ್ಪಿಕೊಳ್ಳುವ ಧಾವಂತದಲ್ಲಿ ಮರಗಳನ್ನು ಕಡಿಯುತ್ತಿದ್ದೇವೆ. ಕೆರೆ-ಕಟ್ಟೆಗಳನ್ನು ಬರಿದಾಗಿಸುತ್ತಿದ್ದೇವೆ. ಆ ಜಾಗವನ್ನು ಕಾಂಕ್ರೀಟ್ ಕಟ್ಟಡಗಳ ಕಾಡು ಮಾಡುತ್ತಿದ್ದೇವೆ. ಆ ಐಷಾರಾಮಿ ಬದುಕು ಬೇಡುವ ಸರಕುಗಳು, ವಾಹನಗಳು, ಅವುಗಳ ಓಡಾಟ, ಜನದಟ್ಟಣೆ, ಹೊಗೆ-ಧೂಳು, ಕೈಗಾರಿಕೆಗಳಿಂದ ಮಾಲಿನ್ಯ- ಇವೆಲ್ಲವೂ ಸೇರಿ ವಾತಾವರಣದ ಉಷ್ಣತೆಯನ್ನು ಹೆಚ್ಚಿಸುತ್ತವೆ. ಗ್ರಾಮೀಣ ಪ್ರದೇಶಗಳ ಪರಿಸ್ಥಿತಿ ಕೂಡ ಇದಕ್ಕಿಂತ ಭಿನ್ನವಾಗಿಲ್ಲ. ನಗರಗಳತ್ತ ಆಕರ್ಷಿತರಾದ ಯುವಜನತೆ ಕೃಷಿ ಬಗ್ಗೆ ಅಸಡ್ಡೆ ತೋರಿರುವುದರಿಂದ ಕೃಷಿ ವಲಯ ಕುಗ್ಗುತ್ತಿದೆ. ಮೇವು ಮತ್ತು ನೀರಿನ ಕೊರತೆಯಿಂದ ಜಾನುವಾರುಗಳ ಸಂಖ್ಯೆ ಕ್ಷೀಣಿಸುತ್ತಿದೆ. ಸಾಂಪ್ರದಾಯಿಕ ಕಸುಬುಗಳು ನಶಿಸಿ ಆ ಜಾಗವನ್ನು ಯಂತ್ರೋಪಕರಣಗಳು ಆಕ್ರಮಿಸಿಕೊಂಡಿವೆ. ಅವುಗಳ ಬಳಕೆ ಅತಿಯಾಗುತ್ತಿದೆ. ಇವೆಲ್ಲವೂ ಬಿಸಿ ಗಾಳಿಗೆ ಕೊಡುಗೆ ನೀಡುತ್ತಿವೆ.

ಬಿಸಿ ಗಾಳಿಯಲ್ಲೂ ಸಾಮಾಜಿಕ ತಾರತಮ್ಯವಿದೆ. ಬಡವರಿಗೊಂದು ಬಲ್ಲಿದರಿಗೊಂದು ಬಗೆ ಇದೆ. ಬಲ್ಲಿದರು ಮಟ್ಟಸವಾದ ಮನೆ, ಫ್ಯಾನ್, ಫ್ರಿಜ್, ಏಸಿಗಳೆಂಬ ಸುರಕ್ಷಿತ ತಾಣಗಳು ಮತ್ತು ಸರಕುಗಳ ಮೊರೆ ಹೋದರೆ; ಬಡವರು ಬಿಸಿ ಗಾಳಿಗೇ ಮೈಯೊಡ್ಡಿ ಮಣಿಸುತ್ತಿದ್ದಾರೆ. ಬೀದಿ ಬದಿ ವ್ಯಾಪಾರಿಗಳು, ದಿನಗೂಲಿ ನೌಕರರು, ಕಟ್ಟಡ ಕಾರ್ಮಿಕರು, ಸುರಕ್ಷಿತ ಸೌಲಭ್ಯಗಳಿಲ್ಲದ ಮನೆಗಳಲ್ಲಿ ವಾಸಿಸುವ ಬಡಜನತೆ- ಇವರು ಬಿಸಿಗಾಳಿಯ ನೇರ ಬಲಿಪಶುಗಳು. ಅಂದರೆ, ಹವಾಮಾನ ಬದಲಾವಣೆ ಕೇವಲ ಪರಿಸರ ಸಮಸ್ಯೆಯಲ್ಲ, ಅದು ಸಾಮಾಜಿಕ ನ್ಯಾಯದ ಪ್ರಶ್ನೆಯೂ ಹೌದು.

ಆದರೆ, ಈ ತಾರತಮ್ಯ, ಈ ಎಚ್ಚರಿಕೆಯನ್ನು ನಾವು ಗಂಭೀರವಾಗಿ ಪರಿಗಣಿಸಿದ್ದೇವೆಯೇ? ಸರ್ಕಾರಗಳು ಬಿಸಿ ಗಾಳಿಗೆ ತಾತ್ಕಾಲಿಕ ಪರಿಹಾರ ಕಾರ್ಯಗಳತ್ತ ಗಮನ ಹರಿಸಿವೆಯೇ? ದೇಶದ ಕೆಲವು ನಗರಗಳಲ್ಲಿ ಹೀಟ್ ಆಕ್ಷನ್ ಪ್ಲಾನ್‌ಗಳ ಘೋಷಣೆ ಇದ್ದರೂ, ಅವುಗಳ ಅನುಷ್ಠಾನದಲ್ಲಿ ಕೊರತೆ ಎದ್ದು ಕಾಣಿಸುತ್ತಿದೆ. ಹಸಿರು ವಲಯಗಳನ್ನು ಹೆಚ್ಚಿಸುವುದು, ನೀರನ್ನು ಸಂರಕ್ಷಿಸುವುದು, ಗಿಡ-ಮರಗಳನ್ನು ಬೆಳೆಸುವುದು, ವಿದ್ಯುತ್ ಬಳಕೆಯನ್ನು ನಿಯಂತ್ರಿಸುವುದು, ಪರಿಸರಸ್ನೇಹಿ ನಗರ ಯೋಜನೆ ರೂಪಿಸುವುದರತ್ತ ಹೆಚ್ಚು ಗಮನ ಹರಿಸಬೇಕಾಗಿದೆ. ಇಲ್ಲಿ ಸರ್ಕಾರಗಳ ರೀತಿ-ನೀತಿಗಳ ಜೊತೆಗೆ ಸಮಾಜದ ಜವಾಬ್ದಾರಿಯೂ ಹೆಚ್ಚಿದೆ. ಪ್ರತಿಯೊಬ್ಬರ ಪಾಲ್ಗೊಳ್ಳುವಿಕೆಯೂ ಪ್ರಮುಖ ಪಾತ್ರ ವಹಿಸಲಿದೆ.

ತಾಪಮಾನ ಹೆಚ್ಚಳ ಮತ್ತು ಬಿಸಿ ಗಾಳಿ ಪ್ರಕೃತಿಯ ಕೋಪವಲ್ಲ, ನಮ್ಮ ನಿರ್ಲಕ್ಷ್ಯದ ಪ್ರತಿಫಲ. ಇದು ಎಚ್ಚರಿಕೆಯ ಗಂಟೆ. ಇದನ್ನು ಅರಿತು ನಮಗಲ್ಲ, ನಮ್ಮ ಮಕ್ಕಳ ನೆಮ್ಮದಿಯ ಬದುಕಿಗಾಗಿ ಜಾಗೃತರಾಗಬೇಕಿದೆ. ಇಲ್ಲದಿದ್ದರೆ, ಇಂದಿನ ಬಿಸಿ ಗಾಳಿಯೇ ನಾಳೆಯ ಮಹಾಪ್ರಳಯವಾದರೂ ಆಶ್ಚರ್ಯವಿಲ್ಲ.

ಸಂಗೀತಪ್ರೇಮಿಗಳ ಎದೆತಣಿಸಿದ ಅಸಲಿ ಪ್ರತಿಭೆ ಆಶಾ ಭೋಸ್ಲೆ

ಆಶಾ ಭೋಸ್ಲೆ ಇಂದು ನಮ್ಮ ನಡುವೆ ಇಲ್ಲದಿದ್ದರೂ, ಅರವತ್ತು ವರ್ಷಗಳ ಕಾಲ ತಮ್ಮ ಸಿರಿಕಂಠದಿಂದ ಸಂಗೀತಪ್ರೇಮಿಗಳ ಎದೆತಣಿಸಿದ ಅವರ ಹಾಡುಗಳು ನವೊಮ್ಮದಿಗಿವೆ. ಅವರ ವೈವಿಧ್ಯತೆ, ವಿಭಿನ್ನತೆ ಮತ್ತು ಸಂಗೀತದೊಂದಿಗಿನ ತಲ್ಲೀನತೆ ಅವರನ್ನು ಜೀವಂತ ದಂತಕಥೆಯನ್ನಾಗಿಸಿದೆ.

ಪತ್ರಕರ್ತ ರಾಜದೀಪ್ ಸರ್ದೇಸಾಯಿ, ತಮ್ಮ ಎಕ್ಸ್‌ನಲ್ಲಿ ಸಣ್ಣ ಹಾಡಿನ ವಿಡಿಯೋ ತುಣುಕೊಂದನ್ನು ಹಂಚಿಕೊಂಡಿದ್ದಾರೆ. ಅದು ಸಂಗೀತ ನಿರ್ದೇಶಕ ಆರ್.ಡಿ. ಬರ್ಮನ್ ಮತ್ತು ಗಾಯಕಿ ಆಶಾ ಭೋಸ್ಲೆಯವರು ಹಾಡಿರುವ ಒಂದು ಹಾಡಿನ ದೃಶ್ಯ. 1972ರಲ್ಲಿ ಬಿಡುಗಡೆಯಾದ ರಾಜೇಶ್ ಖನ್ನಾ ಮತ್ತು ಮುಮ್ತಾಜ್ ನಟಿಸಿರುವ ಅಪ್ನಾ ದೇಶ್ ಚಿತ್ರದ ದುನಿಯಾ ಮೇ ಲೋಗೋ ಕೋ ಹದಿಹರೆಯದವರನ್ನು ಹುಚ್ಚೆಬ್ಬಿಸಿದ ಹಾಡಿನ ದೃಶ್ಯ.

ಆ ಕಾಲಕ್ಕೆ ಅದು ಭಾರೀ ಕ್ರೇಜ್ ಹುಟ್ಟಿಸಿದ ಜನಪ್ರಿಯ ಚಿತ್ರಗೀತೆಯಾಗಿತ್ತು. ಅದಕ್ಕೆ ತಕ್ಕಂತೆ ವೆಸ್ಟರ್ನ್ ಸಂಗೀತ ಸಂಯೋಜನೆಯಿತ್ತು. ಪಾಪ್ ಶೈಲಿಯ ಗಡುಸು ಧ್ವನಿಗೆ ಸ್ವತಃ ಬರ್ಮನ್ ದನಿಗೂಡಿಸಿದ್ದರೆ, ಅದಕ್ಕೆ ವಿರುದ್ಧವಾದ ತಣ್ಣನೆಯ ಫೀಮೇಲ್ ಸಿಂಗರ್ ಆಗಿ ಆಶಾ ಭೋಸ್ಲೆ ಹಾಡಿದ್ದರು.

ಅದೇ ಹಾಡನ್ನು ಖಾಸಗಿ ಸಮಾರಂಭವೊಂದರಲ್ಲಿ ಆರ್.ಡಿ. ಬರ್ಮನ್ ಮತ್ತು ಆಶಾ ಭೋಸ್ಲೆ ಮತ್ತೊಮ್ಮೆ ಹಾಡಿದ್ದರು. ಹಾಡುವಾಗಿನ ಅವರ ಹಾವಭಾವ, ಸಂಗೀತದ ವಾದ್ಯಗಳನ್ನು ನುಡಿಸುವ ನಟನೆ, ಅದಕ್ಕೆ ತಕ್ಕ ಬರ್ಮನ್ ನೃತ್ಯ. ಪಕ್ಕದಲ್ಲಿ ಅದಕ್ಕೆ ತದ್ವಿರುದ್ಧವಾಗಿ ಸೌಮ್ಯವಾಗಿ ನಿಂತು ಹಾಡುತ್ತಿರುವ ಆಶಾ ಭೋಸ್ಲೆ- ನಿಜಕ್ಕೂ ಅದೊಂದು ಅಪರೂಪದ ವಿಡಿಯೋ ತುಣುಕು.

ಸಂಗೀತ ನಿರ್ದೇಶಕ ಆರ್.ಡಿ. ಬರ್ಮನ್ ಮತ್ತು ಗಾಯಕಿ ಆಶಾ ಭೋಸ್ಲೆಯ ಜೋಡಿಯೇ, ಹೇಳಿಮಾಡಿಸಿದ ಅಪರೂಪದ ಅಪೂರ್ವ ಜೋಡಿ. ಅದರಲ್ಲಿ ಸಾಹಿತ್ಯ, ಸಂಗೀತ, ನೃತ್ಯ, ಗಾಯನ ಹದವರಿತು ಮಿಳಿತಗೊಂಡಿತ್ತು. ಭಾರತೀಯ ಸಿನಿಪ್ರಿಯರಿಗೆ ಬೇಕಾದ ಸಂಗೀತ ಧಾರೆಯನ್ನು ಎದೆಗೆ ದಾಟಿಸಿತ್ತು.

ಆ ಜೋಡಿ ಹಕ್ಕಿಯಲ್ಲಿ ಒಂದಾದ ಹಾಡುವ ಹಕ್ಕಿ ಆಶಾ ಭೋಸ್ಲೆ ನಿನ್ನೆ ಭಾನುವಾರ, ತಮ್ಮ 92ನೇ ವಯಸ್ಸಿನಲ್ಲಿ ನಿಧನರಾಗಿದ್ದಾರೆ. ಈ ಮಹಾನ್ ಗಾಯಕಿ ಭಾರತೀಯ ಸಂಗೀತ ಲೋಕದಲ್ಲಿ, 6 ದಶಕಗಳ ಕಾಲ 12 ಸಾವಿರಕ್ಕೂ ಅಧಿಕ ಹಾಡುಗಳನ್ನು ಹಾಡಿ ದಾಖಲೆ ನಿರ್ಮಿಸಿದ್ದಾರೆ. ಹಿಂದಿ ಸೇರಿದಂತೆ 20ಕ್ಕೂ ಹೆಚ್ಚು ಭಾರತೀಯ ಭಾಷೆಗಳಲ್ಲಿ(ಕನ್ನಡದ ಮೂರು ಚಿತ್ರಗಳಿಗೂ ಹಾಡಿದ್ದಾರೆ) ತಮ್ಮದೇ ಆದ ಛಾಪು ಮೂಡಿಸಿದ ಮರೆಯಲಾರದ ಗಾಯಕಿ ಎನಿಸಿಕೊಂಡಿದ್ದಾರೆ.

ಆಶಾ ಭೋಸ್ಲೆ 1933ರ ಸೆಪ್ಟೆಂಬರ್ 8ರಂದು ಮಹಾರಾಷ್ಟ್ರದ ಸಾಂಗ್ಲಿಯಲ್ಲಿ ಜನಿಸಿದರು. ಕೊಂಕಣ ಮೂಲದ ರಂಗಭೂಮಿ ಹಿನ್ನೆಲೆಯಿಂದ ಬಂದ ಅವರ ಕುಟುಂಬ ಕಲಾ ಕುಟುಂಬವಾಗಿತ್ತು. ಸಂಗೀತ ಮತ್ತು ಹಿಂದೂಸ್ತಾನಿ ಗಾಯಕರಾಗಿದ್ದ ತಂದೆ ಪಂಡಿತ್ ದೀನಾನಾಥ್ ಮಂಗೇಶ್ಕರ್ ಬಾಲ್ಯದಲ್ಲಿಯೇ ಸಂಗೀತದ ಪಾಠಗಳನ್ನು ಕಲಿಸಿದರು. ಪ್ರಸಿದ್ಧ ಗಾಯಕಿ ಲತಾ ಮಂಗೇಶ್ಕರ್ ಅವರ ಸಹೋದರಿಯಾಗಿದ್ದರು. ಆದರೆ, ತಂದೆಯ ಅಕಾಲಿಕ ನಿಧನದಿಂದ ಕುಟುಂಬ ಸಂಕಷ್ಟಕ್ಕೆ ನಿಲುಕಿತು. ಕುಟುಂಬದ ಆರ್ಥಿಕ ಪರಿಸ್ಥಿತಿಯನ್ನು ನಿಭಾಯಿಸುವುದಕ್ಕಾಗಿ ಬಹಳ ಚಿಕ್ಕ ವಯಸ್ಸಿನಲ್ಲಿ, ಸಹೋದರಿಯರು ಹಾಡಲು ಆರಂಭಿಸಿದರು.

ಆಶಾ ಭೋಸ್ಲೆ ಅವರು ತುಂಬಾ ಕಿರಿಯ ವಯಸ್ಸಿನಲ್ಲಿಯೇ, ಹದಿನಾರರ ಹರೆಯದಲ್ಲಿ ಮನೆಯವರ ವಿರೋಧದ ನಡುವೆಯೇ ಪ್ರೇಮ ವಿವಾಹವಾಗಿದ್ದರು. ಲೋಕ ತಿಳಿಯುವ ಮುನ್ನವೇ ಮೂರು ಮಕ್ಕಳ ತಾಯಿಯಾಗಿದ್ದರು. ಈ ನಿರ್ಧಾರ ಮೊದಲೇ



ಸಂಕಷ್ಟದಲ್ಲಿದ್ದ ಕುಟುಂಬದಲ್ಲಿ ಬಿರುಗಾಳಿ ಎಬ್ಬಿಸಿತು. ಇದರಿಂದ ಸಹೋದರಿ ಲತಾ ಅವರೊಂದಿಗೆ ಮಾತು ಬಿಡಲು ಕೂಡ ಕಾರಣವಾಯಿತು. ಕುಟುಂಬದಿಂದ ದೂರವಾದ ಆಶಾ, ಪ್ರೇಮಿಸಿ ಮದುವೆಯಾಗಿದ್ದರೂ, ಅಲ್ಲಿಯೂ ಅವರಿಗೆ ನೆಮ್ಮದಿ ಇಲ್ಲವಾಗಿತ್ತು. ಕೌಟುಂಬಿಕ ಕಲಹ, ವಿಚ್ಛೇದನದಿಂದ ನೊಂದು ಬೆಂದುಹೋಗಿದ್ದರು. ಆ ಬೆಂದ ಜೀವಕ್ಕೆ ಗಾಯನ ಸಂಜೀವಿನಿಯಾಗಿ ಒದಗಿಬಂದಿತ್ತು. ಅದರಿಂದ ಸಿಕ್ಕ ಜನಪ್ರಿಯತೆ, ಖ್ಯಾತಿ, ಹಣ ಎಲ್ಲವನ್ನು ಮರೆಸಿತ್ತು.

ಲತಾ ಮತ್ತು ಆಶಾ- ಇಬ್ಬರೂ ಒಂದೇ ಕುಟುಂಬದ ಕುಡಿಗಳಾದರೂ, ಇಬ್ಬರೂ ಸಹ ಅತ್ಯುತ್ತಮ ಗಾಯಕಿಯರಾಗಿ ಹೆಸರು ಮಾಡಿದ್ದರೂ, ಭಾರತೀಯ ಚಿತ್ರರಂಗದಲ್ಲಿ ಇಬ್ಬರೂ ತಮ್ಮದೇ ಆದ ಸ್ಥಾನ ಪಡೆದಿದ್ದರು. ಲತಾ ಭಾವಪೂರ್ಣ ಗೀತೆಗಳಿಗೆ ಪ್ರಸಿದ್ಧರಾದರೆ; ಆಶಾ ಪಾಶ್ಚಾತ್ಯ ಶೈಲಿಯ ಹಾಡುಗಳಿಗೆ ಜನಪ್ರಿಯರಾಗಿದ್ದರು. ಈ ರೀತಿಯ ಪ್ರತ್ಯೇಕ ಗುರುತು ಇದ್ದರೂ, ಕೆಲವೊಮ್ಮೆ ಅವಕಾಶಗಳ ವಿಷಯದಲ್ಲಿ ಇಬ್ಬರ ನಡುವೆ ಸ್ಪರ್ಧೆಯೂ ಇತ್ತು. ಸಂಗೀತ ನಿರ್ದೇಶಕರ ಆಯ್ಕೆಯಿಂದಾಗಿ ಇಬ್ಬರ ನಡುವೆ ವೈಮನಸ್ಸಿಗೂ ಕಾರಣವಾಗಿತ್ತು.

ಲತಾ ಮತ್ತು ಆಶಾರ ಪ್ರತಿಭೆಯನ್ನು ಸೀಳಿ ನೋಡುವ ಸಮಾಜ ಮತ್ತು ಮಾಧ್ಯಮಗಳಿಂದ, ಅತಿ ಹೆಚ್ಚು ನೊಂದವರು ಆಶಾ ಭೋಸ್ಲೆಯವರು. ಏಕೆಂದರೆ, ಅವಕಾಶಗಳು ಅರಸಿ ಬರುತ್ತಿದ್ದುದು ಹೆಚ್ಚಾಗಿ ಅಕ್ಕನಿಗೆ. ಆಶಾ ಎಂದಾಕ್ಷಣ ಕ್ಯಾಬರೆ ಎಂದು ಬ್ರ್ಯಾಂಡ್ ಮಾಡಲಾಗಿತ್ತು. ಅದರಲ್ಲೂ ಮಾಧ್ಯಮಗಳು ಬೇಕೆಂದೇ ಇಬ್ಬರ ನಡುವೆ ಗೆರೆ ಕೊರೆದು, ಯಾರು ಶ್ರೇಷ್ಠ ಎಂಬ ಪ್ರಶ್ನೆ ಎತ್ತುತ್ತಿದ್ದವು. ಆ ಪ್ರಶ್ನೆ ಎದುರಾದಾಗಲೆಲ್ಲ ಆಶಾ ಭಾರೀ ಮುಜುಗರಕ್ಕೆ ಒಳಗಾಗುತ್ತಿದ್ದರು. ತಾನು ಅಕ್ಕನಿಗಿಂತ ಭಿನ್ನ ಎಂದು ತಮ್ಮ ಹಾಡುಗಳ ಮೂಲಕ ತೋರಿದರೂ, ಚಿತ್ರರಂಗ ಇಬ್ಬರ ಪ್ರತಿಭೆಯನ್ನು ಸಮಾನವಾಗಿ ದುಡಿಸಿಕೊಂಡರೂ, ಅಲ್ಲೊಂದು ತಾರತಮ್ಯ ಅವರಿಗೇ ಗೊತ್ತಿಲ್ಲದಂತೆ ನೆಲೆಯಾಗಿತ್ತು.

ಹಾಗೆ ನೋಡಿದರೆ, ಆಶಾ ಮತ್ತು ಲತಾ ನಡುವಿನ ಮುನಿಸು ಒಂದು ಶಾಶ್ವತ ವೈಮನಸ್ಯವಲ್ಲ. ಅದು ಜೀವನದ ಕೆಲವು ಹಂತಗಳಲ್ಲಿ ಉಂಟಾದ ಭಿನ್ನಾಭಿಪ್ರಾಯಗಳು ಮತ್ತು ಪರಿಸ್ಥಿತಿಯ ಪರಿಣಾಮಗಳು ಮಾತ್ರ. ಲತಾ ಮಂಗೇಶ್ಕರ್ ಹೆಚ್ಚು ಸಂಯಮಿತ ಮತ್ತು ಸಂಪ್ರದಾಯಬದ್ಧ ಶೈಲಿಯನ್ನು ಅನುಸರಿಸಿದರೆ; ಆಶಾ ಭೋಸ್ಲೆ ಹೆಚ್ಚು ಮುಕ್ತ ಮನಸ್ಸಿನ, ಪ್ರಯೋಗಶೀಲ ವ್ಯಕ್ತಿತ್ವ ಹೊಂದಿದವರು. ಈ ವ್ಯತ್ಯಾಸವೂ ಅವರ ನಡುವಿನ ಅಂತರಕ್ಕೆ ಕಾರಣವಾಯಿತು. ವಯಸ್ಸಾದಂತೆ, ಮಾಗಿದಂತೆ ಒಂದಾಗಿದ್ದವರು, ಮತ್ತೆ ಒಂದಾದರು. ಪರಸ್ಪರ ಗೌರವ ಮತ್ತು ಸ್ನೇಹವನ್ನು ಕಾಪಾಡಿಕೊಂಡರು. ಹಲವಾರು ಸಂದರ್ಭಗಳಲ್ಲಿ ಒಬ್ಬರಿಗೊಬ್ಬರು ಪ್ರಶಂಸಿಸಿಕೊಂಡರು. ಕೊನೆಯಲ್ಲಿ ಅವರ ಸಂಬಂಧದಲ್ಲಿ ಪ್ರೀತಿ ಮತ್ತು ಗೌರವವೇ ಮುಖ್ಯವಾಗಿ ಉಳಿಯಿತು.

ಇಷ್ಟಾದರೂ, ಈ ಇಬ್ಬರು ಸಹೋದರಿಯರ ಮೇಲಿನ ಅಪವಾದವೊಂದು ಹಾಗೇ ಉಳಿಯಿತು. ಅದು ಹೊಸ ತಲೆಮಾರಿನ ಅನೇಕ ಗಾಯಕಿಯರ ಅವಕಾಶಗಳನ್ನು ಕಿತ್ತುಕೊಂಡರೆಂಬ ಅಪವಾದ. ಹಿಂದಿ ಚಿತ್ರರಂಗದಲ್ಲಿ ಅತ್ಯಂತ ಬೇಡಿಕೆಯಿದ್ದ ಸಂದರ್ಭದಲ್ಲಿ; ಅನೇಕ ಸಂಗೀತ ನಿರ್ದೇಶಕರು, ನಿರ್ಮಾಪಕರು ಇವರ ಮಾತು ಕೇಳುತ್ತಿದ್ದ ಸಮಯದಲ್ಲಿ ಪ್ರತಿಭಾವಂತ ಹೊಸ ಗಾಯಕಿಯರಿಗೆ ಅಡ್ಡಗಾಲು ಹಾಕಿದರು, ಅವರ ಅವಕಾಶಗಳನ್ನು ಕಿತ್ತುಕೊಂಡು ಏಕಸ್ವಾಮ್ಯ ಮೆರೆದರು ಎಂಬ ದೂರು ಇದೆ, ಇರಲಿ.

ಆದರೆ ಆಶಾ ಭೋಸ್ಲೆ ಅವರ ಆರಂಭದ ಸಂಗೀತ ಜೀವನವು ಕೂಡ ಸವಾಲಿನಿಂದ ಕೂಡಿತ್ತು. ಆರಂಭದಲ್ಲಿ ಸಣ್ಣಮಟ್ಟದ ಹಾಡುಗಳಿಂದ ಆರಂಭವಾದ ಅವರ ಪ್ರಯಾಣ, ಶ್ರಮ ಮತ್ತು ಪ್ರತಿಭೆಯಿಂದ ಹಂತ ಹಂತವಾಗಿ ಮೇಲೇರಿ ಸಂಗೀತಲೋಕದ ಶಿಖರವಾದರು. ಆರಂಭದಲ್ಲಿ ಸಂಗೀತ ನಿರ್ದೇಶಕ ಒ.ಪಿ. ನಯ್ಯರ್ ಅವಕಾಶ ನೀಡಿ ಬೆಳೆಸಿದರೆ; ಮುಂದೆ ಆರ್.ಡಿ. ಬರ್ಮನ್, ಆಶಾರನ್ನು ಜೀವನಸಂಗಾತಿಯನ್ನಾಗಿ ಸ್ವೀಕರಿಸಿದ್ದೂ ಅಲ್ಲದೆ, ಅವರ ಕಂಠಸಿರಿಯನ್ನು ಮತ್ತೊಂದು ಹಂತಕ್ಕೆ ಕೊಂಡೊಯ್ದರು.

ಆಶಾ ಭೋಸ್ಲೆ ಅವರು, ಒಂದೇ ರೀತಿಯ ಹಾಡುಗಳಿಗೆ ಸೀಮಿತವಾಗದವರು. ಕ್ಯಾಬರೆ, ಗಝಲ್, ಪಾಪ್, ಫೋಕ್, ಭಜನ್, ಕ್ಲಾಸಿಕಲ್ ಸೇರಿದಂತೆ ಎಲ್ಲಾ ಶೈಲಿಗಳಲ್ಲಿಯೂ ತಮ್ಮ ಸಾಮರ್ಥ್ಯವನ್ನು ಪ್ರದರ್ಶಿಸಿದರು. ಅವರ ಧ್ವನಿಯ ಏರಿಳಿತ, ಲವಲವಿಕೆ ಮತ್ತು ಪ್ರಯೋಗಶೀಲತೆ ಅವರನ್ನು ಇತರರಿಗಿಂತ ಭಿನ್ನವಾಗಿಸಿದೆ. ಅವರ ಕಂಠಕ್ಕೆ ತಕ್ಕಂತೆ ಅವರಿಗೆ ಸಿಕ್ಕ ಆರ್.ಡಿ. ಬರ್ಮನ್ ಅವರ ವಿಶಿಷ್ಟ ಬಗೆಯ ಸಂಗೀತ, ಬೇರೆಯದೇ ಸಂಗೀತ ನಾದವನ್ನು ಭಾರತೀಯರಿಗೆ ಉಣಬಡಿಸಿದವು. ಪಿಯಾ ತೋ ಅಬ್ ತೋ ಆಜಾದಂತಹ ಪ್ರಿಯಕರನ ಕರೆಯುವ ಆ ಹಸ್ಕಿ ವಾಯ್ಸ್‌ಗೆ ಹದಿಹರೆಯದವರು ಹುಚ್ಚೆದ್ದು ಕುಣಿದರು.

ಇಂತಹ ಆಶಾರಿಗೆ ರಾಷ್ಟ್ರೀಯ ಚಲನಚಿತ್ರ ಪ್ರಶಸ್ತಿ, ಫಿಲ್ಮ್‌ಫೇರ್ ಪ್ರಶಸ್ತಿಗಳು ಮತ್ತು ಪ್ರತಿಷ್ಠಿತ ದಾದಾ ಸಾಹೇಬ್ ಫಾಲ್ಕೆ ಸೇರಿದಂತೆ ಅನೇಕ ಗೌರವಗಳು ಲಭಿಸಿವೆ. ಅವರು ಭಾರತ ಮಾತ್ರವಲ್ಲದೆ ವಿಶ್ವದ ಹಲವೆಡೆ ಸಂಗೀತ ಕಾರ್ಯಕ್ರಮಗಳನ್ನು ನಡೆಸಿ, ಅಂತಾರಾಷ್ಟ್ರೀಯ ಮಟ್ಟದಲ್ಲಿಯೂ ಖ್ಯಾತಿ ಗಳಿಸಿದ್ದಾರೆ. ಜೀವನದ ಸಂಕಷ್ಟಗಳನ್ನು ಎದುರಿಸಿ, ತಮ್ಮ ಪರಿಶ್ರಮದಿಂದಲೇ ಉನ್ನತ ಸ್ಥಾನಕ್ಕೆ ಏರಿದ ಅವರು ಅನೇಕ ಯುವ ಗಾಯಕರಿಗೆ ಪ್ರೇರಣೆಯಾಗಿದ್ದಾರೆ. ಅವರು ಇಂದು ನಮ್ಮ ನಡುವೆ ಇಲ್ಲದಿದ್ದರೂ, ಅರವತ್ತು ವರ್ಷಗಳ ಕಾಲ ತಮ್ಮ ಸಿರಿಕಂಠದಿಂದ ಸಂಗೀತಪ್ರೇಮಿಗಳ ಎದೆತಣಿಸಿದ ಅವರ ಹಾಡುಗಳು ನವೊಮ್ಮದಿಗಿವೆ. ಅವರ ವೈವಿಧ್ಯತೆ, ವಿಭಿನ್ನತೆ ಮತ್ತು ಸಂಗೀತದೊಂದಿಗಿನ ತಲ್ಲೀನತೆ ಅವರನ್ನು ಜೀವಂತ ದಂತಕಥೆಯನ್ನಾಗಿಸಿದೆ.

ದಲಿತ-ಶೂದ್ರ ಸಮುದಾಯಗಳ ಹಕ್ಕುಗಳಿಗಾಗಿ ಜೀವನವನ್ನೇ ಮುಡಿಪಿಟ್ಟ ಮಹಾತ್ಮ ಜ್ಯೋತಿಬಾ ಫುಲೆ

ಈ ಸಮಾಜದಲ್ಲಿನ ಅನ್ಯಾಯದ ಜಾತಿ ವ್ಯವಸ್ಥೆ ಮತ್ತು ಸಾಂಪ್ರದಾಯಿಕ ಬ್ರಾಹ್ಮಣ ಸ್ಥಾನಮಾನದ ವಿರುದ್ಧ ನಿಲ್ಲಲು ಜ್ಯೋತಿಬಾ ಸತ್ಯಶೋಧಕ ಸಮಾಜವನ್ನು ಸ್ಥಾಪಿಸಿದರು. ಈ ಮೂಲಕ ತಮ್ಮನ್ನು ತಾವು ದೇವರ ಸಂದೇಶವಾಹಕರು ಮತ್ತು ಸರ್ವಶಕ್ತನಿಗೆ ಸಂಪರ್ಕಿಸುವ ಮಾಧ್ಯಮವೆಂದು ಹೇಳಿಕೊಳ್ಳುವ ಬ್ರಾಹ್ಮಣರಿಗೆ ಸವಾಲು ಹಾಕಿದರು.

ಇಂದು ಜ್ಯೋತಿಬಾ ಫುಲೆ ಜನ್ಮದಿನ. ಇವರು 1827ರ ಏಪ್ರಿಲ್ 11ರಂದು ಮಹಾರಾಷ್ಟ್ರದ ಪುಣೆಯಲ್ಲಿ ಜನಿಸಿದ ಮಹಾನ್ ಸಾಮಾಜಿಕ ಸುಧಾರಕ, ಜಾತಿ ವ್ಯವಸ್ಥೆಯ ವಿರೋಧಿ, ಮಹಿಳಾ ಶಿಕ್ಷಣದ ಪ್ರವರ್ತಕ ಮತ್ತು ದಲಿತ-ಶೂದ್ರ ಸಮುದಾಯಗಳ ಹಕ್ಕುಗಳಿಗಾಗಿ ಜೀವನವನ್ನೇ ಅರ್ಪಿಸಿದ ಅವರ ಬದುಕು ಮತ್ತು ಕಾರ್ಯಸಾಧನೆಗಳು ಭಾರತೀಯ ಸಮಾಜದಲ್ಲಿ ಒಂದು ಕ್ರಾಂತಿಯಾಗಿದೆ. 19ನೇ ಶತಮಾನದಲ್ಲಿ ಬ್ರಾಹ್ಮಣೀಯ ಪ್ರಭುತ್ವ, ಜಾತಿ ತಾರತಮ್ಯ ಮತ್ತು ಮಹಿಳಾ ಅಸಮಾನತೆಯ ವಿರುದ್ಧ ಹೋರಾಡಿದ ಅವರು ಮಹಾತ್ಮಾ ಫುಲೆ ಎಂಬ ಬಿರುದನ್ನು ಪಡೆದರು. ಅವರ ಪತ್ನಿ ಸಾವಿತ್ರಿಬಾಯಿ ಫುಲೆಯವರಿಗೆ ಶಿಕ್ಷಣವನ್ನು ನೀಡುವುದರೊಂದಿಗೆ ಮಹಿಳಾ ಶಿಕ್ಷಣಕ್ಕೆ ಮೊದಲ ಮುನ್ನುಡಿ ಬರೆದರು. ಅಲ್ಲದೆ ಸತ್ಯಶೋಧಕ ಸಮಾಜದ ಮೂಲಕ ಸಮಾನತೆಯ ಸಂದೇಶವನ್ನು ಹರಡಿದರು.

ಭಾರತೀಯ ಜಾತಿ ವ್ಯವಸ್ಥೆಯಲ್ಲಿ ಶೂದ್ರರು ಮತ್ತು ದಲಿತರು ಅನುಭವಿಸುವ ತಾರತಮ್ಯವನ್ನು ಫುಲೆ ಖಂಡಿಸಿದರು. ಅವರು ಭಾರತದಲ್ಲಿ ಒಂದು ಚಳವಳಿಯನ್ನು ಮುನ್ನಡೆಸಿದರು. ಇದು ಯಾರೂ ಮೇಲ್ಜಾತಿಯ ಬ್ರಾಹ್ಮಣರಿಗೆ ಅಧೀನರಾಗಿರುವುದಿಲ್ಲ ಎಂಬ ಹೊಸ ಸಾಮಾಜಿಕ ವ್ಯವಸ್ಥೆಯನ್ನು ಸೃಷ್ಟಿಸಲು ಕರೆ ನೀಡಿತು. ಫುಲೆಯವರು ರೈತರ ಶೋಷಣೆಯ ವಿರುದ್ಧವೂ, ಮಹಿಳೆಯರ ಹಕ್ಕುಗಳಿಗಾಗಿಯೂ ಹೋರಾಡಿದರು. ಸಾಮಾಜಿಕ ಬದಲಾವಣೆಯನ್ನು ತರಲು ಶಿಕ್ಷಣ ಅತ್ಯಗತ್ಯ ಎಂದು ನಂಬಿದ್ದ ಅವರು ಮಹಿಳೆಯರಿಗೆ ಮತ್ತು ಮತ್ತು ತಳಸಮುದಾಯಗಳ ಹೆಣ್ಣುಮಕ್ಕಳಿಗಾಗಿ ಶಾಲೆಗಳನ್ನು ಸ್ಥಾಪಿಸಿದರು.

ಜ್ಯೋತಿರಾವ್ ಗೋವಿಂದರಾವ್ ಫುಲೆ ಅವರು ಈಗ ಪಶ್ಚಿಮ ಮಹಾರಾಷ್ಟ್ರ ರಾಜ್ಯ ಎಂದು ಕರೆಯಲ್ಪಡುವ ಸತಾರಾ ಜಿಲ್ಲೆಯ ಕಟಗುಂ ಗ್ರಾಮದ ಮಾಲಿ(ಹೂವು ಬೆಳೆಯುವ ಶೂದ್ರ ಸಮುದಾಯ) ಕುಟುಂಬದಲ್ಲಿ ಜನಿಸಿದರು. ಅವರ ತಂದೆ ಗೋವಿಂದರಾವ್ ಮತ್ತು ತಾಯಿ ಚಿಮ್ನಾಬಾಯಿ. ತಾಯಿಯವರು ಒಂದು ವರ್ಷದೊಳಗೆ ನಿಧನರಾದರು. ಅವರ ಕುಟುಂಬದಲ್ಲಿ ಹಣ್ಣು, ತರಕಾರಿ ಬೆಳೆಯುವ ಕೃಷಿಕರಾಗಿ ಕೆಲಸ ಮಾಡಲಾಗುತ್ತಿತ್ತು. ಅವರು ಪುಣೆಗೆ ಸ್ಥಳಾಂತರಗೊಂಡ ಬಳಿಕ ಹೂವು ವ್ಯಾಪಾರ ಮಾಡುತ್ತಿದ್ದರು. ಹಾಗಾಗಿಯೇ ಇವರಿಗೆ ಫುಲೆ(ಹೂವು) ಎಂಬ ಹೆಸರು ಬಂದಿದೆ.

ಮಾಲಿ ಸಮುದಾಯದಲ್ಲಿ ಶಿಕ್ಷಣಕ್ಕೆ ಹೆಚ್ಚು ಮಹತ್ವ ನೀಡುತ್ತಿರಲಿಲ್ಲ, ಉನ್ನತ ಶಿಕ್ಷಣವನ್ನು ಪಡೆಯುವುದು ಅಸಾಮಾನ್ಯವಾಗಿತ್ತು. ಫುಲೆಯವರು ಬಾಲ್ಯದಲ್ಲಿ ಪ್ರತಿಭಾನ್ವಿತ ವಿದ್ಯಾರ್ಥಿಯಾಗಿದ್ದರು. ಓದು-ಬರೆಯುವುದು ಮತ್ತು ಅಂಕಿಅಂಶಗಳನ್ನು ಚನ್ನಾಗಿ ಕಲಿತಿದ್ದರು. ಆದರೆ ಮಾಲಿ ಕುಟುಂಬಗಳ ಇತರ ಅನೇಕ ಮಕ್ಕಳಂತೆ, ಅವರು ಚಿಕ್ಕ ವಯಸ್ಸಿನಲ್ಲಿಯೇ ತಮ್ಮ ಅಧ್ಯಯನವನ್ನು ನಿಲ್ಲಿಸಿ ಕುಟುಂಬದ ಜಮೀನಿನಲ್ಲಿ ಕೆಲಸ ಮಾಡಲು ಪ್ರಾರಂಭಿಸಿದರು.

ಫುಲೆಯವರ ನೆರೆಹೊರೆಯವರಲ್ಲಿ ಒಬ್ಬರು ತಮ್ಮ ಮಗನನ್ನು ಶಾಲೆಗೆ ಕಳುಹಿಸಲು ಅವರ ತಂದೆಯನ್ನು ಮನವೊಲಿಸಲು ಸಹಾಯ ಮಾಡಿದರು. 1840ರ ದಶಕದಲ್ಲಿ ಫುಲೆ ಪುಣೆಯಲ್ಲಿ ಸ್ಕಾಟಿಷ್ ಕ್ರಿಶ್ಚಿಯನ್ ಮಿಷನರಿಗಳು ನಡೆಸುತ್ತಿದ್ದ ಮಾಧ್ಯಮಿಕ ಶಾಲೆಯಲ್ಲಿ ವ್ಯಾಸಂಗ ಮಾಡಿದರು. 1847ರಲ್ಲಿ ಇಂಗ್ಲಿಷ್ ಶಿಕ್ಷಣ ಪೂರ್ಣಗೊಳಿಸಿದರು. ಈ ಶಿಕ್ಷಣವು ಅವರ ಜೀವನವನ್ನು ಬದಲಾಯಿಸಿತು. ಅಲ್ಲಿ ಕಲಿತ ಐತಿಹಾಸಿಕ ಚಳವಳಿಗಳು ಮತ್ತು ಚಿಂತಕರಿಂದ ಸ್ಫೂರ್ತಿ ಪಡೆದರು. ಥಾಮಸ್ ಪೇನ್‌ನ ಪುಸ್ತಕ ಸೇರಿದಂತೆ ಅಮೆರಿಕದಲ್ಲಿ ಸ್ವಾತಂತ್ರ್ಯ ಮತ್ತು ಗುಲಾಮಗಿರಿಯ ವಿರುದ್ಧದ ಚಳವಳಿಗಳು, ಬುದ್ಧ ಮತ್ತು ಅತೀಂದ್ರಿಯ, ಕವಿ ಕಬೀರ್ ಅವರ ಕೃತಿಗಳು ಮತ್ತು ಬೋಧನೆಗಳಿಂದ ಪ್ರಭಾವಕ್ಕೊಳಗಾದರು.

1848ರಲ್ಲಿ, ಮೇಲ್ಜಾತಿಯ ಬ್ರಾಹ್ಮಣ ಕುಟುಂಬದ ಸ್ನೇಹಿತನ ಮದುವೆಗೆ ಫುಲೆ ಅವರನ್ನು ಆಹ್ವಾನಿಸಲಾಯಿತು. ವರನ ಸಂಬಂಧಿಕರು ಫುಲೆಯವರನ್ನು ಅವರ ಜಾತಿಯ ಕಾರಣಕ್ಕಾಗಿ ಅಪಹಾಸ್ಯ ಮಾಡಿದರು. ಇದರಿಂದಾಗಿ ಅವರು ಸಮಾರಂಭವನ್ನು ತೊರೆಯಬೇಕಾಯಿತು. ಈ ಘಟನೆಯು ಜಾತಿ ವ್ಯವಸ್ಥೆಯ ಅನ್ಯಾಯಗಳ ವಿರುದ್ಧ ಕ್ರೋಧವನ್ನು ಹುಟ್ಟಿಸಿದ್ದಲ್ಲದೆ ಹೋರಾಟಕ್ಕೆ ಧುಮುಕಲು ಪ್ರೇರಣೆಯಾಯಿತು.

ಫುಲೆಯವರು ತಮ್ಮ 13ನೇ ವಯಸ್ಸಿನಲ್ಲೇ ಮಾಲಿ ಸಮುದಾಯದ ಹುಡುಗಿ ಸಾವಿತ್ರಿಬಾಯಿಯನ್ನು ಮದುವೆಯಾದರು. ತಮ್ಮ ಪತ್ನಿಗೆ ಓದು-ಬರೆಯುವುದನ್ನು ಕಲಿಸಿದರು. ಇದೇ ವೇಳೆ ಅಂದರೆ 1848ರಲ್ಲಿ ಅಹ್ಮದ್ ನಗರದಲ್ಲಿ ಮಿಸನರಿಗಳು ನಡೆಸುತ್ತಿದ್ದ ಮಹಿಳಾ ಶಾಲೆಯನ್ನು ಸಂದರ್ಶಿಸಿದ ನಂತರ ಪುಣೆಯ ಭಿಡೇವಾಡದಲ್ಲಿ ತಳಸಮುದಾಯಗಳ ಹೆಣ್ಣುಮಕ್ಕಳಿಗಾಗಿ ಒಂದು ಪ್ರವರ್ತಕ ಶಾಲೆಯನ್ನು ತೆರೆದರು. ಭಾರತದಲ್ಲಿ ಯಾವುದೇ ಹೆಣ್ಣುಮಕ್ಕಳು ಶಿಕ್ಷಣ ಪಡೆಯುವುದು ಅತ್ಯಂತ ವಿರಳವಾಗಿದ್ದ ಕಾಲದಲ್ಲಿ ಮೊದಲ ಸ್ಥಳೀಯ ಮಹಿಳಾ ಶಾಲೆಯನ್ನು ಆರಂಭಿಸಿದರು. ಸಾವಿತ್ರಿಬಾಯಿ ಅದರ ಮೊದಲ ಶಿಕ್ಷಕಿಯಾದರು. ಸಮಾಜದ ಮೇಲ್ವರ್ಗಗಳು ಇದನ್ನು ತೀವ್ರವಾಗಿ ವಿರೋಧಿಸಿದವು; ಕುಟುಂಬ ಮತ್ತು ಸಮುದಾಯದಿಂದ ಬಹಿಷ್ಕಾರವೂ ಆಯಿತು. ಆದರೆ ಉಸ್ಮಾನ್ ಶೇಖ್ ಮತ್ತು ಫಾತಿಮಾ ಶೇಖ್ ಅವರು ಆಶ್ರಯ ನೀಡಿದರು.

ಮುಂದಿನ ಕೆಲವು ವರ್ಷಗಳಲ್ಲಿ ಅಂದರೆ 1852ರಲ್ಲಿ ಬಾಲಕಿಯರಿಗೆ, ಕೆಳಜಾತಿಯ ಜನರಿಗೆ, ವಿಶೇಷವಾಗಿ ಮಹಾರರು ಮತ್ತು ಮಾಂಗ್ ಸಮುದಾಯಗಳಿಗಾಗಿ ಶಾಲೆಯನ್ನು ತೆರೆದರು. 1852ರಿಂದ 1858ರವರೆಗೆ ಸುಮಾರು 273 ಮಂದಿ ಬಾಲಕಿಯರು ಶಿಕ್ಷಣ ಪಡೆದರು. 1854ರಲ್ಲಿ ವಿಧವೆಯರಿಗೆ ಆಶ್ರಯಸದನ ತೆರೆದರು. ಹೆಣ್ಣು ಶಿಶು ಹತ್ಯೆ ತಡೆಯಲು ನವಜಾತ ಶಿಶುಗಳನ್ನು ಸಾಕಬಹುದಾದ ಶಿಶುಭವನ ತೆರೆದರು. ಸಮಾಜದ ಕೆಳವರ್ಗದ ಜನರ ವಿರುದ್ಧ ತಾರತಮ್ಯ ತೊಡೆದುಹಾಕಲು ತಮ್ಮ ಮನೆಯನ್ನು ಎಲ್ಲರಿಗೂ ಮುಕ್ತವಾಗಿ ತೆರೆದಿದ್ದೇ ಅಲ್ಲದೆ ತಮ್ಮ ಬಾವಿಯಿಂದ ನೀರು ಸೇದುವ ಅವಕಾಶವನ್ನು ಮುಕ್ತವಾಗಿ ಎಲ್ಲರಿಗೂ ನೀಡಿದರು. ಫುಲೆಯವರು ಇಂತಹ ಒಳ್ಳೆಯ ಕಾರ್ಯಗಳನ್ನು ಮಾಡಿದರೂ ಸಾಂಪ್ರದಾಯಿಕ ಬ್ರಾಹ್ಮಣರಿಂದ ಗಮನಾರ್ಹ ವಿರೋಧವನ್ನು ಎದುರಿಸಿದರು. ಸಾಮಾಜಿಕ ಸ್ಥಾನಮಾನಕ್ಕೆ ಅಡ್ಡಿಪಡಿಸಿದರೆಂಬ ದೂಷಣೆಗೆ ಒಳಗಾದರು. ಅದೇನೇ ಇದ್ದರೂ, ಫುಲೆ ಮತ್ತು ಅವರ ಪತ್ನಿ ಸಾಮಾಜಿಕ ಆರ್ಥಿಕ ಮತ್ತು ಲಿಂಗ ಸಮಾನತೆಯ ಕಡೆಗೆ ಹೆಜ್ಜೆಯಿಟ್ಟರು.

ಫುಲೆ ಬಾಲ್ಯ ವಿವಾಹವನ್ನು ವಿರೋಧಿಸಿದರು; ವಿಧವೆಯರು ಮರುಮದುವೆಯಾಗುವ ಹಕ್ಕನ್ನು ಬೆಂಬಲಿಸಿದರು. ಇದನ್ನು ವಿಶೇಷವಾಗಿ ಮೇಲ್ಜಾತಿಯ ಹಿಂದೂಗಳು ತಿರಸ್ಕರಿಸಿದರು. ಆದರೂ ಗರ್ಭಿಣಿಯರಾಗುವ ವಿಧವೆಯರಿಗೆ, ವಿಶೇಷವಾಗಿ ಬ್ರಾಹ್ಮಣ ವಿಧವಾ ಗರ್ಭಿಣಿಯರು ಮತ್ತು ಅವರ ಮಕ್ಕಳಿಗಾಗಿ ಅನಾಥಾಶ್ರಮವನ್ನು ತೆರೆದರು. ನಂತರ ಫುಲೆ ದಂಪತಿ ಈ ಮಕ್ಕಳಲ್ಲಿಯೇ ಒಂದು ಮಗುವನ್ನು ದತ್ತು ಪಡೆದರು.

ಸ್ವಾತಂತ್ರ್ಯ, ಸಮಾನತೆ, ಸೋದರತೆ, ಮಾನವ ಘನತೆ, ಆರ್ಥಿಕ ನ್ಯಾಯದ ಆಧಾರದ ಮೇಲೆ ಹೊಸ ಸಮಾಜ ಕಟ್ಟಬಯಸುವುದಾದರೆ ಶೋಷಣೆ ಮತ್ತು ಅಸಮಾನತೆಯೇ ಮೂಲತತ್ವವಾದ ಹಳೆಯ ವ್ಯವಸ್ಥೆಯನ್ನು ಛಿದ್ರಗೊಳಿಸಲೇಬೇಕೆನ್ನುವುದು ಜ್ಯೋತಿಬಾ ಅವರ ಅಭಿಮತವಾಗಿತ್ತು.

ಹಾಗಾಗಿ, 1873ರಲ್ಲಿ ಫುಲೆ ಅವರು ಸಾಮಾಜಿಕ ಸಮಾನತೆಯನ್ನು ಉತ್ತೇಜಿಸಲು, ಶೂದ್ರರು ಮತ್ತು ಇತರ ಕೆಳಜಾತಿಯ ಜನರನ್ನು ಒಗ್ಗೂಡಿಸಿ ಉನ್ನತೀಕರಿಸಲು ಹಾಗೂ ಜಾತಿ ವ್ಯವಸ್ಥೆಯಿಂದ ಉಂಟಾದ ಸಾಮಾಜಿಕ ಆರ್ಥಿಕ ಅಸಮಾನತೆಯನ್ನು ಹಿಮ್ಮೆಟ್ಟಿಸಲು ಸತ್ಯಶೋಧಕ ಸಮಾಜ ಎಂಬ ಸುಧಾರಣಾ ಸಮಾಜವನ್ನು ಸ್ಥಾಪಿಸಿದರು. ಇದು ಶಿಕ್ಷಣವನ್ನು ಉತ್ತೇಜಿಸುವ, ಸಾಮಾಜಿಕ ಹಕ್ಕುಗಳು, ನ್ಯಾಯ ಮತ್ತು ರಾಜಕೀಯ ಪ್ರವೇಶವನ್ನು ಹೆಚ್ಚಿಸುವ ಸುಧಾರಣಾವಾದಿ ಸಮಾಜವಾಗಿತ್ತು.

ಅಲ್ಲದೆ, ಮಹಾರಾಷ್ಟ್ರದ ದಲಿತರು, ಶೂದ್ರರು ಮತ್ತು ಮಹಿಳೆಯರನ್ನು ಮೇಲಕ್ಕೆತ್ತಿ ಅವರ ಅಭಿವೃದ್ಧಿಗೆ ಬೆಂಬಲ ನೀಡುವುದು ಇದರ ಪ್ರಾಥಮಿಕ ಉದ್ದೇಶವಾಗಿತ್ತು. ಜ್ಯೋತಿಬಾ ಫುಲೆ ಅವರ ಪತ್ನಿ ಸಾವಿತ್ರಿಬಾಯಿ ಅವರು ಮಹಿಳಾ ವಿಭಾಗದ ಸಾಮಾಜಿಕ ಚಟುವಟಿಕೆಗಳನ್ನು ನಿರ್ವಹಿಸುತ್ತಿದ್ದರು. ಈ ಸಮಾಜದಲ್ಲಿನ ಅನ್ಯಾಯದ ಜಾತಿ ವ್ಯವಸ್ಥೆ ಮತ್ತು ಸಾಂಪ್ರದಾಯಿಕ ಬ್ರಾಹ್ಮಣ ಸ್ಥಾನಮಾನದ ವಿರುದ್ಧ ನಿಲ್ಲಲು ಜ್ಯೋತಿಬಾ ಸತ್ಯಶೋಧಕ ಸಮಾಜವನ್ನು ಸ್ಥಾಪಿಸಿದರು. ತಮ್ಮನ್ನು ತಾವು ದೇವರ ಸಂದೇಶವಾಹಕರು ಮತ್ತು ಸರ್ವಶಕ್ತನಿಗೆ ಸಂಪರ್ಕಿಸುವ ಮಾಧ್ಯಮವೆಂದು ಹೇಳಿಕೊಳ್ಳುವ ಬ್ರಾಹ್ಮಣರಿಗೆ ಸವಾಲು ಹಾಕಿದರು.

ಜೋಡಿ ಎತ್ತುಗಳ 2.5 ಟನ್ ತೂಕದ ಕಲ್ಲು ಎಳೆಯುವ ಸ್ಪರ್ಧೆ

ಪೋತ್ನಾಳ್,ಏ.12-

ರೈತರ ಕೃಷಿಗೆ ಎತ್ತುಗಳ ಕೊಡುಗೆ ಅಪಾರವಾಗಿದ್ದು ಇಂತಹ ಸ್ಪರ್ಧೆಗಳಿಂದ ರೈತರಿಗೆ ತಮ್ಮ ಎತ್ತುಗಳ ಶಕ್ತಿ ಪ್ರದರ್ಶನದಿಂದ ಗೌರವ ಹೆಚ್ಚುತ್ತದೆ ಎಂದು ಯದ್ದಲ ದೊಡ್ಡಿ ಸುವರ್ಣಗಿರಿ ಮಠದ ಮಹಾಲಿಂಗ ಮಹಾಸ್ವಾಮಿಗಳು ತಿಳಿಸಿದರು.

ತಾಲೂಕಿನ ಅಡವಿ ಅಮರೇಶ್ವರ ಗ್ರಾಮದಲ್ಲಿನ ಸುವರ್ಣಗಿರಿ ಮಠದ ಶ್ರೀ ಅಡವಿ ಅಮರೇಶ್ವರ ದೇವಸ್ಥಾನದ 72 ನೇ ಜಾತ್ರ ಮಹೋತ್ಸವ ಅಂಗವಾಗಿ ನಡೆದ ಜೊಡಿ ಎತ್ತುಗಳ 2.5 ಟನ್ ತೂಕದ ಕಲ್ಲು ಎಳೆಯುವ ಸ್ಪರ್ಧೆಗೆ ಚಾಲನೆ ನೀಡಿ ಮಾತನಾಡಿದರು.

ಶ್ರೀ ಅಡವಿ ಅಮರೇಶ್ವರ ಮಠದ ಶ್ರೀತೋಂಟಾದಾರ್ಯ ಮಹಾಸ್ವಾಮಿಗಳು, ಬೂದುಗುಂಪ ಮಠದ ಶ್ರೀ ಸಿದ್ದೇಶ್ವರ ಮಹಾಸ್ವಾಮಿಗಳು ದಿವ್ಯಸಾನಿಧ್ಯವನ್ನು ವಹಿಸಿದರು. ಒಟ್ಟು 9 ಜೊಡಿ ಎತ್ತುಗಳು ಸ್ಪರ್ಧೆಯಲ್ಲಿ ಭಾಗವಹಿಸಿದು.

ಜೊಡಿ ಎತ್ತುಗಳ 2.5 ಟನ್ ತೂಕದ ಕಲ್ಲು ಎಳೆಯುವ ಸ್ಪರ್ಧೆಯಲ್ಲಿ 711.10 ಅಡಿಗಳ ದೂರವನ್ನು ಕ್ರಮಿಸಿದ ರಂಗಪ್ಪ ಇರಬಗೇರರವರ ಎತ್ತುಗಳಿಗೆ ಪ್ರಥಮ ಬಹುಮಾನವಾಗಿ ಸಿದ್ದಲಿಂಗಪ್ಪ ವಕೀಲರು 1ಲಕ್ಷದ 11 ಸಾವಿರ ನಗದು ಬಹುಮಾನ ನೀಡಿದರು. ನವಲಕಲ್ ಕಿಚ್ಚ ಬಾಯ್ಸ್ 697.3 ದೂರವನ್ನು ಕ್ರಮಿಸಿ ದ್ವಿತೀಯ ಸ್ಥಾನವನ್ನು ಪಡೆದ ಎತ್ತುಗಳಿಗೆ ಅಮರಯ್ಯ ಮ್ಯಾಕಲ್ 51 ಸಾವಿರ ನಗದು ಬಹುಮಾನವನ್ನು ವಿತರಿಸಿದರು. 604 ಅಡಿ ದೂರ ಕ್ರಮಿಸಿ ತೃತೀಯ ಸ್ಥಾನವನ್ನು ಪಡೆದ ಎತ್ತುಗಳ ಮಾಲಿಕರಾದ ಬಸವನಗೌಡ ಮತಪಲ್ಲಿ ರವರಿಗೆ 30 ಸಾವಿರ ನಗದು ಬಹುಮಾನವನ್ನು ಜೆ.ಸುಧಾಕರ್ ನೀಡಿದರು. ಉಳಿದ 6 ಜೊಡಿ ಎತ್ತುಗಳು ಕೂಡ ಉತ್ತಮ ಪ್ರದರ್ಶನವನ್ನು ನೀಡಿದವು.

ಅಯ್ಯಪ್ಪನಾಯಕ ಮ್ಯಾಕಲ್, ಮಾಜಿ ಶಾಸಕರಾದ ಗಂಗಾಧರ ನಾಯಕ, ವ್ಯುಖಡ್‌ರಾದ ದೊಡ್ಡಬಸಪ್ಪಗೌಡ, ವೀರಭದ್ರಗೌಡ ಭೋಗವತಿ, ಅಮರಯ್ಯನಾಯಕ, ಗೋಪಿ, ಅಮರೇಶ್ವರ, ಮಲ್ಲಿಕಾರ್ಜುನ ಪೋತ್ನಾಳ್, ಬಸವರಾಜಪ್ಪ, ಸತ್ಯನಾರಾಯಣ ಮುಸ್ಟೂರು ಸೇರಿದಂತೆ ಇನ್ನಿತರರು ಇದ್ದರು.

ಪತ್ರಿಕೆ ಓದುವ ಹವ್ಯಾಸ ಬೆಳಸಿಕೊಳ್ಳಿ

Printed and Published by: SUNDAR and Owned by: SUNDAR Printed at: SHILPA PUBLICATIONS AND PRINTING PRESS, No. 5-122/2,Ward No.20, Vidya Nagara Colony, Sirwar-584129, Raichur Dist, Karnataka. Published at: No. 5-122/2,Ward No.20, Vidya Nagara Colony, Sirwar-584129, Raichur Dist, Karnataka. Editor: SUNDAR